

Mangalacharana Sandhi - 2
Jayagalu agali - 5
guru madhwaraayarige - 6
rAGaveMdra gururAyara sEvisiro - 7
satata gaNanAtha - 8
satya jagatidu paMca - 9
vaMdipe ninage gaNanAtha - 10
aa pa-raMtapa – HKS padya - 10
namaH pArvati - 11
kRuti-ramaNa – HKS Padya - 11
catura- vadanana – HKS Padya - 12
pavamAna jagadaprANa -12
veera hanuma -13
SrI mahAlakShmiya -14
hosakaNNu enage -15
jaya kolhApura nilayE -16
vEMkaTaramaNane bArO - 17
baMdanO gOviMda - 18
shrInivAsa nInE - 18
manyusUktaM - 19
nArAyaNa nArAyaNa - 21
biDenO ninnaMghri - 24
SrInivAsA gOviMdA -25

sATiyuMTe SrInivAsana - 35
vArijalayapate vArijanABane - 35
jai jai rAma harE - 37
naMdEnadO svAmi - 40
Preenayamo - 40
Kuru bhumkshva - 44
Mastyakarupa - 45
Srinivasa Kalyana - 46
Venkatesha Stavaraja - 50
Bega horata - 54
kattida mangalasutrava - 55
Vara vaikunthadi - 56
Ninna olumeyinda - 57
-------------------------------------

೧. ಮಂಗಳಾಚರಣ ಶಂಧಿ
ಹರಿಕ-ಥಾಮೃತ -- ಸಾರ-ಗುರುಗಳ |
ಕರುಣ-ದಿಂದಾ -- ಪನಿತು-ಪೇಳುವೆ |
ಪರಮ-ಭಗವದ್ -- ಭಕ್ತ-ರಿದನಾ -- ದರದಿ-ಕೇಳುವು-ದು || ಪ ||

ಶ್ರೀರ-ಮಣಿ ಕರ -- ಕಮಲ- ಪೂಜಿತ |
ಚಾರು- ಚರಣ ಸ -- ರೋಜ- ಬ್ರಹ್ಮ ಸ- |
ಮೀರ- ವಾಣಿ ಫ -- ಣೀಂದ್ರ- ವೀಂದ್ರ ಭ -- ವೇಂದ್ರ- ಮುಖ ವಿನು-ತ ||
ನೀರ-ಜ ಭವಾಂ -- ಡೋದ-ಯ ಸ್ಥಿತಿ |
ಕಾರ-ಣನೆ ಕೈ -- ವಲ್ಯ-ದಾಯಕ |
ನಾರ-ಸಿಂಹನೆ -- ನಮಿಪೆ-ಕರುಣಿಪು -- ದೆಮಗೆ-ಮಂಗಳ-ವ || ೧-೧ ||

ಜಗದು-ದರನತಿ -- ವಿಮಲ-ಗುಣರೂ- |
ಪಗಳ-ನಾಲೋ -- ಚನದಿ- ಭಾರತ |
ನಿಗಮ-ತತಿಗಳ -- ತಿಕ್ರ-ಮಿಸಿ ಕ್ರೀ -- ಯಾ ವಿ-ಶೇಷಗ-ಳ ||
ಬಗೆ- ಬಗೆಯ-ನೂ -- ತನವ- ಕಾಣುತ |
ಮಿಗೆ- ಹರುಷ-ದಿಂ -- ಪೊಗಳಿ- ಹಿಗ್ಗುವ |

ತ್ರಿಗುಣ-ಮಾನಿ ಮ -- ಹಾಲ-ಕುಮಿ ಸಂ -- ತೈಸ-ಲನುದಿನ-ವು ‖ ೧-೨ ‖

ನಿರುಪ-ಮಾನಂ -- ದಾತ್ಮ-ಭವ ನಿ- |
ರ್ಜರ ಸ-ಭಾ ಸಂ -- ಸೇವ್ಯ- ಋಜು ಗಣ- |
ದರಸೆ- ಸತ್ವ -- ಪ್ರಚುರ-ವಾಣೀ -- ಮುಖ ಸ-ರೋಜೇ-ನ ‖
ಗರುಡ- ಶೇಷ ಶ -- ಶಾಂಕ- ದಳ ಶೇ- |
ಖರರ- ಜನಕ ಜ -- ಗದ್ಗು-ರುವೆ ತ್ವ- |
ಚ್ಚರಣ-ಗಳಿಗಭಿ -- ವಂದಿ-ಸುವೆ ಪಾ -- ಲಿಪುದು- ಸನ್ಮತಿ-ಯ ‖ ೧-೩ ‖

ಆರು- ಮೂರೆರ -- ಡೊಂದು-ಸಾವಿರ |
ಮೂರೆ-ರಡು ಶತ -- ಶ್ವಾಸ- ಜಪಗಳ |
ಮೂರು-ವಿಧ ಜೀ -- ವರೊಳ-ಗಬ್ಜಜ -- ಕಲ್ಪ- ಪರಿಯಂ-ತ ‖
ತಾ ರ-ಚಿಸಿ ಸಾ -- ತ್ವರಿಗೆ-ಸುಖ ಸಂ- |
ಸಾರ- ಮಿಶ್ರರಿ -- ಗಧಮ- ಜನರಿಗ- |
ಪಾರ- ದುಃಖಗ -- ಳೀವ-ಗುರು ಪವ -- ಮಾನ- ಸಲಹೆ-ಮ್ಮ ‖ ೧-೪ ‖

ಚತುರ- ವದನನ -- ರಾಣಿ- ಅತಿರೋ- |
ಹಿತ-ವಿಮಲ ವಿ -- ಜ್ಞಾನಿ- ನಿಗಮ |
ಪ್ರತತಿ-ಗಳಿಗಭಿ -- ಮಾನಿ-ವೀಣಾ -- ಪಾಣಿ- ಬ್ರಹ್ಮಾ-ಣಿ ‖
ನತಿಸಿ- ಬೇಡುವೆ -- ಜನನಿ- ಲಕ್ಷ್ಮೀ- |
ಪತಿಯ- ಗುಣಗಳ -- ತುತಿಪು-ದಕೆ ಸ- |
ನ್ಮತಿಯ- ಪಾಲಿಸಿ -- ನೆಲೆಸು-ನೀ ಮದ್ -- ವದನ- ಸದನದ-ಲಿ ‖ ೧-೫ ‖

ಕೃತಿ-ರಮಣ-ಪ್ರ -- ದ್ಯುಮ್ನ - ನಂದನೆ |
ಚತುರ-ವಿಂಶತಿ -- ತತ್ವ-ಪತಿ ದೇ- |
ವತೆಗ-ಳಿಗೆ ಗುರು -- ವೆನಿಸು-ತಿಹ ಮಾ -- ರುತನ- ನಿಜಪ-ತ್ನಿ ‖
ಸತತ-ಹರಿಯಲಿ -- ಗುರುಗ-ಳಲಿ ಸ- |
ದ್ರತಿಯ-ಪಾಲಿಸಿ -- ಭಾಗ-ವತ ಭಾ- |

ರತ ಪು-ರಾಣ ರ -- ಹಸ್ಯ-ತತ್ವಗ -- ಳರುಪು-ಕರುಣದ-ಲಿ ‖ ೧-೬ ‖

ವೇದ-ಪೀಠ ವಿ -- ರಿಂಚಿ- ಭವ ಶ- |
ಕ್ರಾದಿ- ಸುರ ವಿ -- ಜ್ಞಾನ- ದಾಯಕ |
ಮೋದ- ಚಿನ್ಮಯ -- ಗಾತ್ರ-ಲೋಕ ಪ -- ವಿತ್ರ- ಸುಚರಿ-ತ್ರ ‖
ಛೇದ- ಭೇದ ವಿ -- ಷಾದ- ಕುಟಿಲಾಂ- |
ತಾದಿ- ಮಧ್ಯ ವಿ -- ದೂರ- ಆದಾ- |
ನಾದಿ- ಕಾರಣ -- ಬಾದ-ರಾಯಣ -- ಪಾಹಿ- ಸತ್ರಾ-ಣ ‖ ೧-೭ ‖

ಕ್ಷಿತಿಯೊ-ಳಗೆ ಮಣಿ -- ಮಂತ- ಮೊದಲಾ- |
ದತಿ ದು-ರಾತ್ಮರು -- ಒಂದ-ಧಿಕ ವಿಂ- |
ಶತಿ ಕು-ಭಾಷ್ಯವ -- ರಚಿಸೆ- ನಡುಮನೆ -- ಯೆಂಬ- ಬ್ರಾಹ್ಮಣ-ನ ‖
ಸತಿಯ- ಜಠರದೊ -- ಳವತ-ರಿಸಿ ಭಾ- |
ರತಿ ರ-ಮಣ ಮ -- ಧ್ವಾಭಿ-ಧಾನದಿ |
ಚತುರ-ದಶ ಲೋ -- ಕದಲಿ-ಮೆರೆದ -- ಪ್ರತಿಮ-ಗೊಂದಿಸು-ವೆ ‖ ೧-೮ ‖

ಪಂಚ- ಭೇದಾ -- ತ್ಮಕ ಪ್ರ-ಪಂಚಕೆ |
ಪಂಚ- ರೂಪಾ -- ತ್ಮಕನೆ- ದೈವಕ |
ಪಂಚ- ಮುಖ ಶ -- ಕ್ರಾದಿ-ಗಳು ಕಿಂ -- ಕರರು- ಶ್ರೀಹರಿ-ಗೆ ‖
ಪಂಚ- ವಿಂಶತಿ -- ತತ್ವ- ತರತಮ |
ಪಂಚಿ-ಕೆಗಳನು -- ಪೇಳ್ದ- ಭಾವಿ ವಿ-|
ರಿಂಚಿ- ಯೆನಿಪಾ -- ನಂದ-ತೀರ್ಥರ -- ನೆನೆವೆ-ನನುದಿನ-ವು ‖ ೧-೯ ‖

ವಾಮ-ದೇವ ವಿ -- ರಿಂಚಿ-ತನಯ ಉ- |
ಮಾ ಮ-ನೋಹರ -- ಉಗ್ರ- ಧೂರ್ಜಟಿ ‖
ಸಾಮ-ಜಾಜಿನ -- ವಸನ- ಭೂಷಣ -- ಸುಮನ-ಸೋತ್ತಂ-ಸ ‖
ಕಾಮ-ಹರ ಕೈ -- ಲಾಸ- ಮಂ-ದಿರ |
ಸೋಮ-ಸೂರ್ಯಾ -- ನಲ ವಿ-ಲೋಚನ |

ಕಾಮಿ-ತಪ್ರದ -- ಕರುಣಿ-ಸೆಮಗೆ ಸ -- ದಾ ಸು-ಮಂಗಳ-ವ ‖ ೧-೧೦ ‖

ಕೃತ್ತಿ-ವಾಸನೆ -- ಹಿಂದೆ- ನೀ ನಾ- |
ಲ್ವತ್ತು- ಕಲ್ಪ ಸ -- ಮೀರ-ನಲಿ ಶಿ- |
ಷ್ಯತ್ವ- ವಹಿಸಖಿ -- ಳಾಗ-ಮಾರ್ಥಗ -- ಳೋದಿ- ಜಲಧಿಯೊ-ಳು ‖
ಹತ್ತು- ಕಲ್ಪದಿ--ತಪವ- ಗೈದಾ- |
ದಿತ್ಯ-ರೊಳಗು -- ತ್ತಮನೆ-ನಿಸಿ ಪುರು- |
ಷೋತ್ತ-ಮನ ಪರಿ -- ಯಂಕ- ಪದವೈ -- ದಿದೆಯೊ- ಮಹದೇ-ವ ‖ ೧-೧೧ ‖

ಪಾಕ-ಶಾಸನ -- ಮುಖ್ಯ- ಸಕಲ ದಿ- |
ವೌಕ-ಸರಿಗಭಿ -- ನಮಿಪೆ- ಋಷಿಗಳಿ- |
ಗೇಕ-ಚಿತ್ತದಿ -- ಪಿತೃಗ-ಳಿಗೆ ಗಂ -- ಧರ್ವ- ಕ್ಷಿತಿಪರಿ-ಗೆ ‖
ಆ ಕ-ಮಲನಾ -- ಭಾದಿ- ಯತಿಗಳ |
ನೀಕ-ಕಾನಮಿ -- ಸುವೆನು- ಬಿಡದೆ ರ- |
ಮಾಕ-ಳತ್ರನ -- ದಾಸ-ವರ್ಗಕೆ -- ನಮಿಪೆ-ನನವರ-ತ ‖ ೧-೧೨ ‖

ಪರಿಮ-ಳವು ಸುಮ -- ನದೊಳ-ಗನಲನು |
ಅರಣಿ-ಯೊಳಗಿ -- ಪ್ಪಂತೆ- ದಾಮೋ- |
ದರನು- ಬ್ರಹ್ಮಾ -- ದಿಗಳ- ಮನದಲಿ -- ತೋರಿ- ತೋರದ-ಲೆ ‖
ಇರುತಿ-ಹ ಜಗ -- ನ್ನಾಥ- ವಿಠಲನ |
ಕರುಣ- ಪಡೆವ ಮು -- ಮುಕ್ಷು- ಜೀವರು |
ಪರಮ- ಭಾಗವ -- ತರನು- ಕೊಂಡಾ -- ಡುವುದು- ಪ್ರತಿದಿನ-ವು ‖ ೧-೧೩ ‖

---------------------------------------

ಜಯಗಳು ಆಗಲಿ ಅಪಜಯಗಳು ಹೋಗಲಿ

ಜಯದೇವೀ ರಮಣಾ ಒಲಿಯಲಿ ಕೋಲೇ
ಜಯದೇವೀ ರಮಣಾ ಒಲಿಯಲಿ ನಮ್ಮ

ವಿಜಯರಾಯರ ಕೀರ್ತಿ ಮೆರೆಯಲು ಕೋಲೆ
ದಸರಾಯರ ಕೀರ್ತಿ ಮೆರೆಯಲು ಕೋಲೆ |೧|

ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ
ಹರಿದಾಸರೆಂಬೋ ಬಿರುದಿನ ಕೋಲೆ
ಹರಿದಾಸರೆಂಬೋ ಬಿರುದಿನ ಹೆಕ್ಕಾಲೆ
ಹಿರಿಬಾಗಿಲೊಳಗೆ ನುಡಿಸೇವು ಕೋಲೆ |೨|

ಪನ್ನಂಗ ಶಯನ ಸುಪರ್ಣ ವಾಹನ
ಸುಪರ್ಣ ವಾಹನ ಸುಖಪೂರ್ಣ ಕೋಲೆ
ಸುಪರ್ಣ ವಾಹನ ಸುಖಪೂರ್ಣನಾದ
ಮೋಹನ ವಿಠ್ಠಲ ಕರುಣಿಸು ಕೋಲೆ |೩|

ಕೋಲು ಕೋಲೆ ರಂಗ ಕೋಲು ಕೋಲೆ
ಕೋಲು ಕೋಲೆ ಕೃಷ್ಣ ಕೊಲು ಕೊಲೆ ||

---

ಗುರು ಮಧ್ವರಾಯರಿಗೆ ನಮೋ ನಮೋ | ನಮ್ಮ
ಗುರು ಜಯರಾಯರಿಗೆ ನಮೋ ನಮೋ || ಪ ||

ಶ್ರೀಪಾದರಾಜರಿಗೆ ಗುರುವ್ಯಾಸರಾಜರಿಗೆ |
ಗುರುವಾದಿರಾಜರಿಗೆ ನಮೋ ನಮೋ || ೧ ||

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ|
ಪುರುಂದರದಾಸರಿಗೆ ನಮೋ ನಮೋ || ೨ ||

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ |
ಶ್ರೀರಂಗವಲಿದ ದಾಸರಿಗೆ ನಮೋ ನಮೋ || ೩ ||

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ |
ಹುಂಡೇಕಾರ ದಾಸರಿಗೆ ನಮೋ ನಮೋ || ೪ ||

ಗುರು ಶ್ರೀಶವಿಠಲನ ಪರಮ ಭಕ್ತರ ಚರಣ |
ಸರಸಿಜಯುಗಗಳಿಗೆ ನಮೋ ನಮೋ || ೫ ||

-----------------------------------

ರಾಘವೇಂದ್ರ ಗುರುರಾಯರ ಸೇವಿಸಿರೊ,
ಸೌಖ್ಯದಿ ಜೀವಿಸಿರೊ [ಪ]

ತುಂಗಾತೀರದಿ ರಘುರಾಮನ ಪೂಜಿಪರೊ,
ನರಸಿಂಘನ ಭಜಕರೋ [ಅ.ಪ]

ಶ್ರೀ ಸುಧೀಂದ್ರ ಕರ ಸರೋಜ ಸಂಜಾತಾ
ಜಗದೊಳಗೆ ಪುನೀತಾ
ದಾಶರತಿಯ ದಾಸತ್ವವ ತಾ ವಹಿಸಿ,
ದುರ್ಮತಿಗಲ ಜಯಿಸಿ
ಏಅ ಸಮೀರ ಮತ ಸಂಸ್ತಾಪಕರಾಗಿ,
ನಿಂದಕರನು ನೀಗಿ
ಭೂಸುರರಿಗೆ ಸಮ್ಸೇವ್ಯ ಸದಾಚರಣೀ,
ಕಂಗೋಲಿಸುವ ಕರುಣಿ [೧]

ಕುಂದದೆ ವರ ಮಂತ್ರಾಲಯದಲ್ಲಿರುವ
ಕರೆದಲ್ಲಿಗೆ ಬರುವ
ಬೃಂದವನಗತ ಮೃತ್ತಿಕೆ ಜಲಪಾನ
ಮುಕುತಿಗೆ ಸೋಪಾನ,
ಸಂದರುಶನ ಮಾತ್ರದಲಿ ಮಹತ್ಪಾಪ
ಬಡೆದೋಡಿಸಲಾಪ
ಮಂದ ಭಾಗ್ಯರಿಗೆ ದೊರಕದಿವರ ಸೇವ,

ಶರಣರ ಸಂಜೀವಾ [೨]

ಶ್ರೀದ ವಿಠ್ಠಲನ ಸನ್ನಿಧಾನ ಪಾತ್ರ
ಸಂಸ್ತುತಿಸಲು ಮಾತ್ರ,
ಮೋದ ಪಡಿಸುತಿಹ ತಾನಿಹಪರದಲ್ಲಿ
ಈತಗೆ ಸರಿಯೆಲ್ಲಿ
ಮೇದಿನಿಯೊಳಗೆ ಇನ್ನರಸಲು ನಾ ಕಾಣೆ
ಪುಸಿಯಲ್ಲಯ ಎನ್ನಾಣೆ
ಪಾದ ಸ್ಮರಣೆಯ ಮಾಡದವನೆ ಪಾಪಿ,
ನಾ ಪೇಳ್ವೆನು ಸ್ಥಾಪಿ [೩]
--------------------------------------
ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತಿ ದೇವೀ ||ಪ||

ಮುಕುತಿ ಪಥಕೆ ಮಾನವೀವ ಮಹಾರುದ್ರ ದೇವರು,
ಹರಿ ಭಕುತಿ ದಾಯಕಳು ಭಾರತಿದೇವಿ,

ಯುಕುತಿ ಶಾಸ್ತ್ರಗಳ್ಲಲಿ ವನಜ ಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು,

ಗತಿ ಪಾಲಿಸುವ ನಮ್ಮ ಪವಮಾನನು
ಚಿತ್ತದಲ್ಲಿ ಆನಂದ ಸುಖವನೀವಳು ರಮಾ,

ಭಕುತ ಜನರೊಡೆಯ ನಮ್ಮ ಪುರಂದರ ವಿಠಲನು,
ಸತತ ಇವರಲ್ಲಿ ನಿಂತು ಈ ಕೃತಿಯ ನಡೆಸುವನು ||
--------------------------------------

ಸತ್ಯ ಜಗತಿದು ಪಂಚ ಭೇದವು , ನಿತ್ಯ ಶ್ರೀ ಗೋವಿಂದನ
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ [ಪ]

ಜೀವ ಈಶಗೆ ಭೇದ ಸರ್ವತ್ರ
ಜೀವ ಜೀವಕೆ ಭೇದವು
ಜೀವ ಜಡ ಜಡ ಜಡಕೆ ಭೇದ
ಜೀವ ಜಡ ಪರಮಾತ್ಮಗೆ [೧]

ಮಾನುಷೋತ್ತಮಗಧಿಕ ಕ್ಷಿತಿಪರು
ಮನುಜ ದೇವ ಗಂಧರ್ವರು
ಜ್ಞಾನಿ ಪಿತ ಅಜಾನಜ ಕರ್ಮಜ
ದಾನವಾರಿ ಸತ್ವಾತ್ಮರು [೨]

ಗಣಪ ಮಿತ್ರರು ಸಪ್ತ ಋಷಿಗಳು
ವಹ್ನಿ ನಾರದ ವರುಣನು
ಇನಜಗೆ ಸಮ ಸೂರ್ಯ ಚಂದ್ರರು
ಮನುಸತಿಯು ಹೆಚ್ಚು ಪ್ರವಹನು [೩]

ದಕ್ಷ ಸಮ ಅನಿರುದ್ಧ ಗುರು ಶಚಿ
ರತಿ ಸ್ವಾಯಂಭುವರಾರ್ವರು
ಪಕ್ಷ ಪ್ರಾಣನಿಗಿಂತ ಕಾಮನು
ಕಿಂಚಿದಧಿಕನು ಇಂದ್ರನು [೪]

ದೇವ ಇಂದ್ರನಿಗಧಿಕ ಮಹರುದ್ರ
ದೇವ ಸಮ ಶೇಷಗರುಡರು
ಕೇವಲಧಿಕರು ಶೇಶ ಗರುಡಗೆ
ದೇವಿ ಭಾರತಿ ಸರಸ್ವತಿ [೫]

ವಾಯುವಿಗೆ ಸಮರಿಲ್ಲ ಜಗದೊಳು
ವಾಯು ದೇವರೆ ಬ್ರಹ್ಮರು
ವಾಯು ಬ್ರಹ್ಮಗೆ ಕೋಟಿ ಗುಣದಿಂದ
ಅಧಿಕ ಶಕ್ತಳು ಶ್ರೀ ರಮಾ [೫]

ಅನಂತ ಗುಣದಿಂ ಲಕುಮಿಗಧಿಕನು
ಶ್ರೀ ಪುರಂದರವಿಠಲನು
ಘನ ಸಮರು ಇವಗಿಲ್ಲ ಜಗದೊಳು
ಹನುಮ ಹೃತ್ಪದ್ಮ ವಾಸಿಗೆ [೬]
--------------------------------------
ವಂದಿಪೆ ನಿನಗೆ ಗಣನಾಥ
ಮೊದಲೊಂದಿಪೆ ನಿನಗೆ ಗಣನಾಥ,
ಬಂದ ವಿಘ್ನ ಕಳೆ ಗಣನಾಥ ||

ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ,
ಸಂದ ರಣದಲಿ ಗಣನಾಥ ೧

ಮಾಧವನ ಆಜ್ಞೆಯಿಂದ ಧರ್ಮರಾಜ ಪೂಜಿಸಲು,
ಸಾಧಿಸಿದ ರಾಜ್ಯ ಗಣನಾಥ ೨

ಮಂಗಳ ಮೂರುತಿ ಗುರು ರಂಗ ವಿಠ್ಠಲನ ಪಾದ ,
ಹಿಂಗದೆ ಪಾಲಿಸು ಗಣನಾಥ ೩
--------------------------------------
ಆ ಪ-ರಂತಪ -- ನೊಲುಮೆ-ಯಿಂದ ಸ- |
ದಾಪ-ರೋಕ್ಷಿಗ -- ಳೆನಿಸಿ- ಭಗವ- |
ದ್ರೂಪ- ಗುಣಗಳ -- ಮಹಿಮೆ- ಸ್ವಪತಿಗ -- ಳಾನ-ನದಿ ತಿಳಿ-ವ ||
ಸೌಪ-ರಣಿ ವಾ -- ರುಣಿ ನ-ಗಾತ್ಮಜ- |
ರಾಪ-ನಿತು ಬ -- ಣ್ಣಿಸುವೆ- ಎನ್ನ ಮ- |

ಹಾಪ-ರಾಧಗ -- ಳೆಣಿಸ-ದೀಯಲಿ -- ಪರಮ- ಮಂಗಳ-ವ || ೩೨-೧೫ ||

--------------------------------------

ನಮಃ ಪಾರ್ವತಿ ಪತಿ ನುತ ಜನಪರ ನಮೊ ವಿರೂಪಾಕ್ಷ |ಪ|
ರಮಾ ರಮಣನಲಿ ಅಮಲ ಭಕುತಿ ಕೊಡು ನಮೊ ವಿಶಾಲಕ್ಷ |ಅಪ|

ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತ ರಕ್ಷ
ಫಾಲನೆತ್ರ ಕಪಾಲ ರುಂಡ ಮಣಿ ಮಾಲಾಧೃತ ವಕ್ಷ ||
ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ
ಶ್ರೀ ಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ (೧)

ವಾಸವನುತ ಹರಿದಾಸ ಈಶ ಕೈಲಾಸವಾಸ ದೇವ
ದಾಶರಥಿಯ ಔಪಾಸಕ ಸುಜನರ ಪೋಶಿತ ಪ್ರಭಾವ|
ಭಾಷಿಸುತಿಹುದು ಅಪೆಕ್ಷ ಜೀವರಿಗೆ ಈಶ ನೆಂಬ ಭಾವ
ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ  (೨)

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃಥ್ಯನ ಸರ್ವತ್ರ
ಹತ್ತಿರ ಕರೆದು ಅಪತ್ಯನಂತೆ ಕಾಯುತ್ತಿರೊ ತ್ರಿನೇತ್ರ
ತೆತ್ತಿಗನಂತೆ ಕಾಯುತ್ತಿದೆ ಜಾಣನ ಸತ್ಯದಿ ಸುಚರಿತ್ರ
ಕರ್ತೃ ಉದುಪಿ ಸರ್ವೋತ್ತಮ ಕೃಷ್ಣನ ಪೌತ್ರ ಕೃಪಾಪಾತ್ರ (೩)

--------------------------------------

ಕೃತಿ-ರಮಣ-ಪ್ರ -- ದ್ಯುಮ್ನ - ನಂದನೆ |
ಚತುರ-ವಿಂಶತಿ -- ತತ್ವ-ಪತಿ ದೇ- |
ವತೆಗ-ಳಿಗೆ ಗುರು -- ವೆನಿಸು-ತಿಹ ಮಾ -- ರುತನ- ನಿಜಪ-ತ್ನಿ ||
ಸತತ-ಹರಿಯಲಿ -- ಗುರುಗ-ಳಲಿ ಸ- |
ದ್ರತಿಯ-ಪಾಲಿಸಿ -- ಭಾಗ-ವತ ಭಾ- |
ರತ ಪು-ರಾಣ ರ -- ಹಸ್ಯ-ತತ್ವಗ -- ಳರುಪು-ಕರುಣದ-ಲಿ || ೧-೬ ||

--------------------------------------

ಚತುರ- ವದನನ -- ರಾಣಿ- ಅತಿರೋ- |

ಹಿತ-ವಿಮಲ ವಿ -- ಜ್ಞಾನಿ- ನಿಗಮ |
ಪ್ರತತಿ-ಗಳಿಗಭಿ -- ಮಾನಿ-ವೀಣಾ -- ಪಾಣಿ- ಬ್ರಹ್ಮಾ-ಣಿ ||
ನತಿಸಿ- ಬೇಡುವೆ -- ಜನನಿ- ಲಕ್ಷ್ಮೀ- |
ಪತಿಯ- ಗುಣಗಳ -- ತುತಿಪು-ದಕೆ ಸ- |
ನ್ಮತಿಯ- ಪಾಲಿಸಿ -- ನೆಲೆಸು-ನೀ ಮದ್ -- ವದನ- ಸದನದ-ಲಿ || ೧-೫ ||
------------------------------------

ಪವಮಾನ ಪವಮಾನ
ಪವಮಾನ ಜಗದಪ್ರಾಣ ಸಂಕರುಷಣ
ಭವಭಯಾರಣ್ಯ ದಹನಾ, ಪವನ ||ಪ||
ಶ್ರವಣವೆ ಮೊದಲಾದ ನವವಿಧ ಭಕುತಿಯ|
ತವಕದಿಂದಲಿ ಕೊಡು ಕವಿಜನ ಪ್ರಿಯ||ಅ.ಪ||

ಹೇಮಕಚ್ಛುಟ ಉಪವೀತ ಧರಿಪ ಮಾರುತ |
ಕಾಮಾದಿ ವರ್ಗರಹಿತ ||
ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ |
ರಾಮಚಂದ್ರನ ನಿಜದೂತ ||
ಯಾಮ ಯಾಮಕೆ ನಿನ್ನಾರಾಧಿಪುದಕೆ |
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ |
ಈಮನಸಿಗೆ ಸುಖಸ್ತೋಮವ ತೋರುತ |
ಪಾಮರಮತಿಯನು ನೀ ಮಾಣಿಪುದು ||೧||

ವಜ್ರ ಶರೀರ ಗಂಭೀರ  ಮುಕುಟಧರ |
ದುರ್ಜನ ವನಕುಠಾರ |
ನಿರ್ಜರ ಮಣಿ ದಯಾಪಾರ ವಾರ ಉದಾರ |
ಸಜ್ಜನ ರಘುಪರಿಹಾರ ||
ಅರ್ಜುನಗೊಲಿದಂದು ಧ್ವಜವಾನಿಸಿನಿಂದು  |
ಮೂರ್ಜಗವರಿವಂತೆ ಗರ್ಜನೆ ಮಾಡಿದೆ |
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ |

ಮಾರ್ಜನದಲಿ ಭವ ವರ್ಜಿತನೆನಿಸೊ ||೨||

ಪ್ರಾಣ ಅಪಾನ ವ್ಯಾನೋದಾನ ಸಮಾನ |
ಆನಂದ ಭಾರತಿ ರಮಣ |
ನೀನೆ ಶರ್ವಾದಿ ಗೀರ್ವಾಣ ದ್ಯಮರರಿಗೆ |
ಜ್ಞಾನ ಧನ ಪಾಲಿಪ ವರೆಣ್ಯಾ |
ನಾನು ನಿರುತದಲಿ ಏನೇನೆಸಗಿದೆ |
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ |
ಪ್ರಾಣನಾಥ ಸಿರಿವಿಜಯ ವಿಠ್ಠಲನ |
ಕಾಣಿಸಿ ಕೊಡುವುದು ಭಾನು ಪ್ರಕಾಶಾ ||೩||
---------------------------------------
ವೀರ ಹನುಮ ಬಹು ಪರಾಕ್ರಮ

ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ||

ರಾಮದೂತ ನೆನಿಸಿಕೊಂಡೆ ನೀ ,

ರಾಕ್ಷಸರ ವನವನೆಲ್ಲ ಕಿತ್ತು ಬಂದೆ ನೀ

ಜಾನಕಿಗೆ ಮುದ್ರೆಯಿತ್ತು , ಜಗತಿಗೆಲ್ಲ ಹರುಷವಿತ್ತು ಚೂಡಾ-

ಮಣಿಯ ರಾಮಗಿತ್ತು ಲೊಕಕೆ ಮುದ್ದೆನಿಸಿ ಮೆರೆವ ||೧||

ಗೋಪಿ-ಸುತನ ಪಾದ ಪೂಜಿಸಿ

ಗದೆಯ ಧರಿಸಿ ಬಕಾಸುರನ ಸಂಹರಿಸಿದೆ

ದ್ರೌಪದಿಯ ಮೊರೆಯ ಕೇಳಿ ಮತ್ತೆ ಕೀಚಕನ್ನ ಕೊಂದು

ಭೀಮನೆಂಬ ನಾಮ ಧರಿಸಿ ಸಂಗ್ರಾಮ ಧೀರನಾಗಿ ಜಗದಿ ||೨||

ಮಧ್ಯಗೇಹನಲ್ಲಿ ಜನಿಸಿ ನೀ

ಬಾಲ್ಯದಲ್ಲಿ ಮತ್ಸರಿಯ ರೂಪಗೊಂಡೆ ನೀ

ಸತ್ಯವತಿಯ ಸುತನ ಭಜಿಸಿ ಸಮ್ಮುಖದಿ ಭಾಷ್ಯ ಮಾಡಿ

ಸಜ್ಜನ ಪೊರೆವ ಮುದ್ದು ಪುರಂದರ ವಿಠ್ಠಲನ ದಾಸ ||೩||

-------------------------------------

ಶ್ರೀ ಮಹಾಲಕ್ಷ್ಮಿಯ ಅಲಂಕರಿಸಿ ಕರೆದರು ||

ಕೇಶವ ನಿಮ್ಮ ನಾಮ ಮಾಂಗಲ್ಯಸೂತ್ರ ತಾಳಿ
ನಾರಾಯಣ ನಿಮ್ಮ ನಾಮ ತಾಳಿ ಪದಕವು
ಮಾಧ್ವ ನಿಮ್ಮ ನಾಮ ಸುರಗಿ ಸಂಪಿಗೆ ಮೊಗ್ಗು
ಗೋವಿಂದ ನಿಮ್ಮ ನಾಮ ಗೋದಿಯ ಸರವು ||೧||

ವಿಷ್ಣುವೆ ನಿಮ್ಮ ನಾಮ ರತ್ನ ಕುಂಡಲಗಳು
ಮಧುಸೂದನ ನಿಮ್ಮ ನಾಮ ಮಾಣಿಕ್ಯದ ಹರಳು
ತ್ರಿವಿಕ್ರಮ ನಿಮ್ಮ ನಾಮ ವಂಕಿ ನಾಗಮುರುಗೆಯು
ವಾಮನ ನಿಮ್ಮ ನಾಮ ಓಲೆ ಏಕಾವಳಿಯು ||೨||

ಶ್ರೀಧರ ನಿಮ್ಮ ನಾಮ ಒಳ್ಳೆ ಮುತ್ತಿನ ಹಾರ
ಹೃಷಿಕೇಶ ನಿಮ್ಮ ನಾಮ ಕಡಗ ಗೆಜ್ಜೆಯು
ಪದ್ಮನಾಭ ನಿಮ್ಮ ನಾಮ ಮುತ್ತಿನಡ್ಡಿಗೆಯು
ದಾಮೋದರ ನಿಮ್ಮ ನಾಮ ರತ್ನದ ಪದಕವು ||೩||

ಸಂಕರ್ಷಣ ನಿಮ್ಮ ನಾಮ ವಂಕಿ ತೋಳಾಯಿತು
ವಾಸುದೇವ ನಿಮ್ಮ ನಾಮ ಒಲಿದ ತೋಡೆ
ಪ್ರದ್ಯುಮ್ನ ನಿಮ್ಮ ನಾಮ ಹಸ್ತಕಂಕಣ ಬಳೆ
ಅನಿರುದ್ಧ ನಿಮ್ಮ ನಾಮ ಮುಕುರ ಬುಲಾಕು ||೪||

ಪುರುಷೋತ್ತಮ ನಿಮ್ಮ ನಾಮ ಹೊಸ ಮುತ್ತಿನ ಮೂಗುತಿ
ಅಧೋಕ್ಷಜ ನಿಮ್ಮ ನಾಮ ಚಂದ್ರ ಸೂರ್ಯ
ನರಸಿಂಹ ನಿಮ್ಮ ನಾಮ ಚೌರಿ ರಾಗಟಿ ಗೊಂಡಿ
ಅಚ್ಯುತ ನಿಮ್ಮ ನಾಮ ಮುತ್ತಿನ ಬಟ್ಟಲು ||೫||

ಜನಾರ್ದನ ನಿಮ್ಮ ನಾಮ ಜರಿಯ ಪೀತಾಂಬರ
ಉಪೇಂದ್ರ ನಿಮ್ಮ ನಾಮ ಕಡಗ ಗೆಜ್ಜೆಯು
ಶ್ರೀಹರಿ ನಿಮ್ಮ ನಾಮ ಕಂಚು ವಂಕಿಯ ತುಳಸಿ
ಶ್ರೀಕೃಷ್ಣ ನಿಮ್ಮ ನಾಮ ನಡುವಿನೊಡ್ಯಾಣವು ||೬||

ಸರಸಿಜಾಕ್ಷ ನಿಮ್ಮ ನಾಮ ಅರಶಿನ ಎಣ್ಣೆಯ ಹಚ್ಚಿ
ಪಂಕಜಾಕ್ಷ ನಿಮ್ಮ ನಾಮ ಕುಂಕುಮ ಕಾಡಿಗೆಯು
ಪುರಂದರ ವಿಠ್ಠಲ ನಿಮ್ಮ ನಾಮ ಸರ್ವಾಭರಣವು
ನಿಲುವ ಕನ್ನಡಿಯಲಿ ಲಲನೆಯ ತೋರಿಸುತ ||೭||
-------------------------------------
ಹೊಸಕಣ್ಣು ಎನಗೆ ಹಚ್ಚಲಿಬೇಕು ಜಗದಂಬಾ | ವಸುದೇವ
ಸುತನ ಕಾಂಬುದಕೆ || ಪ ||
ಘಸಣೆಯಾಗಿದೆ ಭವ ವಿಷಯ ವಾರಿಧಿಯೊಳು | ಶಶಿಮುಖಿ
ಕರುಣದಿ ಕಾಯೇ ||ಅ. ಪ.||

ಪರರ ಅನ್ನವನುಂಡು | ಪರರ ಧನವ ಕೊಂಡು ಪರಿ ಪರಿ
ಕ್ಲೇಶಗಳಿಂದ ||
ವರಮಹಾಲಕುಮಿ ನಿನ್ನ ಚರಣಕ್ಕೆ ಮೊರೆಹೊಕ್ಕೆ
ಕರುಣದಿ ಕಣ್ಣೆತ್ತಿ ನೋಡೇ || ೧ ||

ಮಂದಹಾಸಿನಿ ಭವ | ಸಿಂಧುವಿನೊಳಗಿಟ್ಟು |
ಛಂದವೇ ಅಮ್ಮ ನೋಡುವದು |
ಕಂದನೆಂತೆಂದೆನ್ನ ಕುಂದುಗಳೆಣಿಸದೆ |

ಮಂದರೋದ್ಧರನ ತೋರಮ್ಮ || ೨ ||

ಅಂದ ಚಂದಗಳೊಲ್ಲೆ | ಬಂಧು ಬಳಗವನೊಲ್ಲೆ |
ಬಂಧನಕೆಲ್ಲ ಕಾರಣವು ||
ಇಂದಿರೇಶನ ಪಾದ ದ್ವಂದ್ವವ ತೋರಿ | ಹೃನ್ಮಂದಿರದೊಳು
ಬಂದು ನಿಲ್ಲೆ || ೩ ||
--------------------------------------
ಜಯ ಕೊಲ್ಹಾಪುರ ನಿಲಯೇ ಭಜದಿಷ್ಟೇತರ ವಿಲಯೇ
ತವ ಪಾದೌ ಹೃದಿಕಲಯೇ ರತ್ನ ರಚಿತ ವಲಯೇ ||

ಜಯ ಜಯ ಸಾಗರ ಜಾತೇ ಕುರುಕರುಣಾಂ ಮಯಿ ಭೀತೇ
ಜಗದಂಬಾ ಭಿದಯಾತೇ ಜೀವತಿ ತವಪೋತೇ ||೧||

ಜಯ ಜಯ ಸಾಗರ ಸದನೇ ಜಯ ಕಾಂತ್ಯಾಜಿತ ಮದನೇ
ಜಯ ದುಷ್ಟಾಂತಕ ಕದನೇ ಕುಂದ ಮುಕುಲರದನೇ ||೨||

ಸುರ ರಮಣಿ ನುತ ಚರಣೇ ಸುಮನಃ ಸಂಕಟ ಹರಣೇ
ಸುಸ್ವರ ರಂಜಿತ ವೀಣೇ ಸುಂದರ ನಿಜ ಕಿರಣೇ ||೩||

ಕುಂಕುಮ ರಂಜಿತ ಫಾಲೇ ಕುಂಜರ ಬಾಂಧವ ಲೋಲೇ
ಕಲಧೌತಾಮಲ ಚೇಲೇ ಕೃಂತ ಕುಜನ ಜಾಲೇ ||೪||

ಭಜದಿಂದೀವರ ಸೋಮೇ ಭವ ಮುಖ್ಯಾಮರ ಕಾಮೇ
ಭಯ ಮುಲಾಳಿವಿರಾಮೇ ಭಂಜಿತ ಮುನಿ ಭೀಮೇ ||೫||

ಧೃತ ಕರುಣಾ ರಸ ಪೂರೇ ಧನ ದಾನೋತ್ಸವ ಧೀರೇ
ಧ್ವನಿಲವ ನಿಂದಿತ ಕೀರೇ ಧೀರೇ ದನುಜ ಧಾರೇ ||೬||

ಸುರ ಹೃತ್ಪಂಜರ ಕೀರೇ ಸುಮಗೇಹಾರ್ಪಿತ ಹಾರೇ
ಸುಂದರ ಕುಂಜವಿಹಾರೇ ಸುರವರ ಪರಿವಾರೇ ||೭||

ವರಕಬರೀ ಧೃತಕುಸುಮೇ ವರಕನಕಾಧಿಕ ಸುಷಮೇ
ವನನಿಲಯಾ ದಯ ಭೀಮೇ ವದನ ವಿಜಿತ ಸೋಮೇ ||೮||

ಮದಕಲಭಾ ಲಸಗಮನೇ ಮಧು ಮಥನಾ ಲಸನಯನೇ
ಮೃದು ಲೋಲಾಲಕ ರಚನೇ ಮಧುರ ಸರಸ ಗಾನೇ ||೯||

ವ್ಯಾಘ್ರಪುರೀ ವರನಿಲಯೇ ವ್ಯಾಸ ಪದಾರ್ಪಿತ ಹೃದಯೇ
ಕುರು ಕರುಣಾಂ ಮಯಿ ಸದಯೇ ವಿವಿಧ ನಿಗಮಗೇಯೇ ||೧೦||
--------------------------------------
ವೇಂಕಟರಮಣನೆ ಬಾರೋ
ಶೇಷಾಚಲ ವಾಸನೆ ಬಾರೋ [ಪ]
ಪಂಕಜ ನಾಭಪರಮ ಪವಿತ್ರ
ಶಂಕರ ಮಿತ್ರನೇ ಬಾರೋ [ಅ.ಪ]

ಮುದ್ದು ಮುಖದ ಮಗುವ
ನಿನಗೆ ಮುದ್ದು ಕೊಡುವೆನು ಬಾರೋ
ನಿರ್ದಯವೇಕೋ ನಿನ್ನೊಳಗೆ ನಾನು
ಪೊಂದಿದ್ದೇನು ಬಾರೋ [೧]

ಮಂದರ ಗಿರಿಯನೆತ್ತಿದಾನಂದ
ಮೂರುತಿಯೇ ಬಾರೋ
ನಂದನಕಂದ ಗೋವಿಂದ ಮುಕುಂದ
ಇಂದಿರೆಯರಸನೆ ಬಾರೋ [೨]

ಕಾಮನಯ್ಯ ಕರುಣಾಳೊ

ಶ್ಯಾಮಲ ವರ್ಣನೆ ಬಾರೋ,
ಕೋಮಲಾಂಗ ಶ್ರೀ ಪುರಂದರ ವಿಠಲನೆ
ಸ್ವಾಮಿ ರಾಯನೆ ಬಾರೋ [೩]

-------------------------------------

ಬಂದನೋ ಗೋವಿಂದ ಚಂದದಿ ಆನಂದ |
ಸುಂದರಿಯ ಮಂದಿರಕ್ಕೆ ನಂದನ ಕಂದ, ಆ ನಂದನ ಕಂದ || ಪ ||

ಸುಂದರಾಕಾರ ಬಂದ ನಂದ ಕಂದ ಗಂಭೀರ |
ಇಂದು ವದನೆಯರಾ ಮುಖಗಳಂದ ನೋಡಿದ |
ಗಂಧ ಕುಸುಮಾ ಕರ-ದಿಂದ ಮುಡಿಸಿದ |
ನಂದನೊ ಆನಂದನೊ ಅರ-ವಿಂದ ನಯನ || ೧ ||

ಕಾನನಾದಲ್ಲಿ ಬಲು ದೀರಾದಲ್ಲಿ |
ವೇಣುನಾದವೂ ತಾ ಕೂಡಿ ಮೋದದಿ |
ಜಾಣನಿವನೂ ಸುಮ ಬಾಣ ಪಿತನು |
ಮಾನಿನಿಯ ಮನೆಗಳಲ್ಲಿ ಗಾನ ಮಾಡುತಾ,
ಇವ ಗಾನ ಮಾಡುತ್ತ || ೨ ||

ಓಡಿ ಬಂದರೋ ಬಲು ಬೇಡಿಕೊಂಡರೋ |
ಗಾಡಿಗಾರನೂ ಅವರ ಕೂಡಿ ಮೆರೆದನೂ |
ಮಾಡಿದ ಜಾಲ ವಾಸುದೇವ ವಿಠಲ |
ಮಾಡಿದ ಮನ ಮಾಡಿದ ತಾ ಕೂಡಿದನಾಗ || ೩ ||

-------------------------------------

ಶ್ರೀನಿವಾಸ ನೀನೇ ಪಾಲಿಸೋ ಶ್ರುತಜನ ಪಾಲ
ಗಾನಲೋಲ ಶ್ರೀ ಮುಕುಂದನೇ || ಪ ||

ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ
ವೇಣುಗೋಪಾಲಾ ಗೋವಿಂದ ವೇದವೇದ್ಯ ನಿತ್ಯಾನಂದ ||ಅ.ಪ||

ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ
ಎಂದಿಗೆ ಲಭ್ಯವೋ ಮಾಧವ
ಅಂಧಕಾರಣ್ಯದಲ್ಲಿ ನಿಂದು ತತ್ತರಿಸುತಿಹೆನೊ
ಅಂದದಿಂ ಭವಾಬ್ಧಿಯೊಳು ಮಿಂದು ನೊಂದೆನೊ ಮುಕುಂದ ||೧||

ಎಷ್ಟು ದಿನ ಕಷ್ಟ ಪಡುವುದೊ
ಯಶೋದೆ ಕಂದ ದೃಷ್ಟಿಯಿಂದ ನೋಡಲಾಗದೆ
ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ನರಜನ್ಮದವ
ದುಷ್ಟ ಕಾರ್ಯ ಮಾಡಿದಾಗ್ಯು ಇಷ್ಟನಾಗಿ ಕೈಯ್ಯಪಿಡಿದು ||೨||

ಅನುದಿನ ಅನೇಕ ರೋಗಗಳಾ ಅನುಭವಿಸಿದೆನೊ
ಘನ್ನ ಮಹಿಮ ನೀನೆ ಕೇಳಯ್ಯಾ
ತನುವಿನಲ್ಲಿ ಬಲವಿಲ್ಲ ನೆನೆದ ಮಾತ್ರ ಸಲಹುವ
ಹನುಮದೀಶ ಪುರಂದರ ವಿಠಲನೇ ನೀ ಕೈಯ್ಯ ಪಿಡಿದು ||೩||

---------------------------------------

ಅಥ ಮನ್ಯುಸೂಕ್ತಂ
ಋಗ್ವೇದ ಸಂಹಿತಾ; ಮಂಡಲಂ ೧೦; ಸೂಕ್ತಂ ೮೩,೮೪

ಯಸ್ತೇ ಮನ್ಯೋಽವಿಧದ್ ವಜ್ರ ಸಾಯಕ ಸಹ ಓಜಃ ಪುಷ್ಯತಿ ವಿಶ್ವಮಾನುಷಕ್ |
ಸಾಹ್ಯಾಮ ದಾಸಮಾರ್ಯಂ ತ್ವಯಾ ಯುಜಾ ಸಹಸ್ಕೃತೇನ ಸಹಸಾ ಸಹಸ್ವತಾ || ೧ ||

ಮನ್ಯುರಿಂದ್ರೋ ಮನ್ಯುರೇವಾಸ ದೇವೋ ಮನ್ಯುರ್ ಹೋತಾ ವರುಣೋ ಜಾತವೇದಾಃ |
ಮನ್ಯುಂ-ವಿಁಶ ಈಳತೇ ಮಾನುಷೀರ್ಯಾಃ ಪಾಹಿ ನೋ ಮನ್ಯೋ ತಪಸಾ ಸಜೋಷಾಃ || ೨ ||

ಅಭೀಹಿ ಮನ್ಯೋ ತವಸಸ್ತವೀಯಾನ್ ತಪಸಾ ಯುಜಾ ವಿ ಜಹಿ ಶತ್ರೂನ್ |
ಅಮಿತ್ರಹಾ ವೃತ್ರಹಾ ದಸ್ಯುಹಾ ಚ ವಿಶ್ವಾ ವಸೂನ್ಯಾ ಭರಾ ತ್ವಂ ನಃ || ೩ ||

ತ್ವಂ ಹಿ ಮನ್ಯೋ ಅಭಿಭೂತ್ಯೋಜಾಃ ಸ್ವಯಂಭೂರ್ಭಾಮೋ ಅಭಿಮಾತಿಷಾಹಃ |
ವಿಶ್ವಚರ್-ಷಣಿಃ ಸಹುರಿಃ ಸಹಾವಾನಸ್ಮಾಸ್ವೋಜಃ ಪೃತನಾಸು ಧೇಹಿ || ೪ ||

ಅಭಾಗಃ ಸನ್ನಪ ಪರೇತೋ ಅಸ್ಮಿ ತವ ಕ್ರತ್ವಾ ತವಿಷಸ್ಯ ಪ್ರಚೇತಃ |
ತಂ ತ್ವಾ ಮನ್ಯೋ ಅಕ್ರತುರ್ಜಿಹೀಳಾಹಂ ಸ್ವಾತನೂರ್ಬಲದೇಯಾಯ ಮೇಹಿ || ೫ ||

ಅಯಂ ತೇ ಅಸ್ಮ್ಯುಪ ಮೇಹ್ಯರ್ವಾಙ್ ಪ್ರತೀಚೀನಃ ಸಹುರೇ ವಿಶ್ವಧಾಯಃ |
ಮನ್ಯೋ ವಜ್ರಿನ್ನಭಿ ಮಾಮಾ ವವೃತ್ಸ್ವಹನಾವ ದಸ್ಯೂನ್ ಋತ ಬೋಧ್ಯಾಪೇಃ || ೬ ||

ಅಭಿ ಪ್ರೇಹಿ ದಕ್ಷಿಣತೋ ಭವಾ ಮೇಽಧಾ ವೃತ್ರಾಣಿ ಜಂಘನಾವ ಭೂರಿ |
ಜುಹೋಮಿ ತೇ ಧರುಣಂ ಮಧ್ವೋ ಅಗ್ರಮುಭಾ ಉಪಾಂಶು ಪ್ರಥಮಾ ಪಿಬಾವ || ೭ ||

ತ್ವಯಾ ಮನ್ಯೋ ಸರಥಮಾರುಜಂತೋ ಹರ್ಷಮಾಣಾಸೋ ಧೃಷಿತಾ ಮರುತ್ವಃ |
ತಿಗ್ಮೇಷವ ಆಯುಧಾ ಸಂಶಿಶಾನಾ ಅಭಿ ಪ್ರಯಂತು ನರೋ ಅಗ್ನಿರೂಪಾಃ || ೮ ||

ಅಗ್ನಿರಿವ ಮನ್ಯೋ ತ್ವಿಷಿತಃ ಸಹಸ್ವ ಸೇನಾನೀರ್ನಃ ಸಹುರೇ ಹೂತ ಏಧಿ |
ಹತ್ವಾಯ ಶತ್ರೂನ್ ವಿ ಭಜಸ್ವ ವೇದ ಓಜೋ ಮಿಮಾನೋ ವಿಮೃಧೋ ನುದಸ್ವ || ೯ ||

ಸಹಸ್ವ ಮನ್ಯೋ ಅಭಿಮಾತಿಮಸ್ಮೇ ರುಜನ್ ಮೃಣನ್ ಪ್ರಮೃಣನ್ ಪ್ರೇಹಿ ಶತ್ರೂನ್ |
ಉಗ್ರಂ ತೇ ಪಾಜೋ ನನ್ವಾ ರುರುಧ್ರೇ ವಶೀ ವಶಂ ನಯಸ ಏಕಜ ತ್ವಮ್ || ೧೦ ||

ಏಕೋ ಬಹೂನಾಮಸಿ ಮನ್ಯವೀಳಿತೋ ವಿಶಂವಿಁಶಂ-ಯುಁಧಯೇ ಸಂ ಶಿಶಾಧಿ |
ಅಕೃತ್ತರುಕ್ ತ್ವಯಾ ಯುಜಾ ವಯಂ ದ್ಯುಮಂತಂ ಘೋಷಂ-ವಿಁಜಯಾಯ ಕೃಣ್ಮಹೇ || ೧೧

ವಿಜೇಷಕೃದಿಂದ್ರ ಇವಾನವಬ್ರವೋ(ಓ)ಽಸ್ಮಾಕಂ ಮನ್ಯೋ ಅಧಿಪಾ ಭವೇಹ ಃ
ಪ್ರಿಯಂ ತೇ ನಾಮ ಸಹುರೇ ಗೃಣೀಮಸಿ ವಿದ್ಮಾತಮುತ್ಸಂ-ಯುಁತ ಆಬಭೂಥ || ೧೨ ||

ಆಭೂತ್ಯಾ ಸಹಜಾ ವಜ್ರ ಸಾಯಕ ಸಹೋ ಬಿಭರ್ಷ್ಯಭಿಭೂತ ಉತ್ತರಮ್ |

ಕ್ರತ್ವಾ ನೋ ಮನ್ಯೋ ಸಹಮೇದ್ಯೇಧಿ ಮಹಾಧನಸ್ಯ ಪುರುಹೂತ ಸಂಸೃಜಿ || ೧೩ ||

ಸಂಸೃಷ್ಟಂ ಧನಮುಭಯಂ ಸಮಾಕೃತಮಸ್ಮಭ್ಯಂ ದತ್ತಾಂ-ವೌರುಣಶ್ಚ ಮನ್ಯುಃ |
ಭಿಯಂ ದಧಾನಾ ಹೃದಯೇಷು ಶತ್ರವಃ ಪರಾಜಿತಾಸೋ ಅಪ ನಿಲಯಂತಾಮ್ || ೧೪ ||

ಧನ್ವನಾಗಾಧನ್ವ ನಾಜಿಂಜಯೇಮ ಧನ್ವನಾ ತೀವ್ರಾಃ ಸಮದೋ ಜಯೇಮ |
ಧನುಃ ಶತ್ರೋರಪಕಾಮಂ ಕೃಣೋತಿ ಧನ್ವ ನಾಸರ್ವಾಃ ಪ್ರದಿಶೋ ಜಯೇಮ ||

ಓಂ ಶಾಂತಾ ಪೃಥಿವೀ ಶಿವಮಂತರಿಕ್ಷಂ ದ್ಯೌರ್ನೋ ದೇವ್ಯ೯ಭಯನ್ನೋ ಅಸ್ತು |
ಶಿವಾ ದಿಶಃ ಪ್ರದಿಶ ಉದ್ದಿಶೋ ನ೯ಆಪೋ ವಿಶ್ವತಃ ಪರಿಪಾಂತು ಸರ್ವತಃ ಶಾಂತಿಃ ಶಾಂತಿಃ
ಶಾಂತಿಃ ||

---------------------------------------

ನಾರಾಯಣ ನಾರಾಯಣ ಗೋವಿಂದ ಹರೀ
ನಾರಾಯಣ ನಾರಾಯಣ ಗೋವಿಂದ ||ಪ||
ನಾರಾಯಣ ಗೋವಿಂದ ಗೋವಿಂದ ಮುಕುಂದ ಪರತರ ಪರಮಾನಂದ ||ಅಪ||

(ಬದರಿ, ಪಂಢರಿ, ಉಡುಪಿ, ರಂಗ, ತಿರುಮಲ, ವೆಂಕಟ)
ಮೊದಲು ಮತ್ಸ್ಯನಾಗಿ ಉದಿಸಿ ಸೋಮನ
ಸದೆದು ವೇದಗಳ ತಂದ |
ಮಂದರಧರ ತಾ ಸಿಂಧುವಿನೊಳಮೃತ
ತಂದು ಭಕ್ತರಿಗೆ ಉಣಲೆಂದ

ನಾರಾಯಣ ನಾರಾಯಣ ಗೋವಿಂದ
ಹರಿ ನಾರಾಯಣ ನಾರಾಯಣ ಗೋವಿಂದ
ಮತ್ಸ್ಯ ನಾರಾಯಣ ನಾರಾಯಣ ಗೋವಿಂದ
ಕೂರ್ಮ ನಾರಾಯಣ ನಾರಾಯಣ ಗೋವಿಂದ

ಭೂಮಿಯ ಕದ್ದಾ ಖಳನ ಮರ್ದಿಸಿ
ಆ ಮಹಾಸತಿಯೆಳ ತಂದ
ದುರುಳ ಹಿರಣ್ಯನ ಕರುಳು ಬಗೆದು
ತನ್ನ ಕೊರಳೊಳಗಿಟ್ಟಾ ಬಗೆಯಿಂದಾ

ನಾರಾಯಣ ನಾರಾಯಣ ಗೋವಿಂದ
ಹರಿ ನಾರಾಯಣ ನಾರಾಯಣ ಗೋವಿಂದ
ವರಾಹ ನಾರಾಯಣ ನಾರಾಯಣ ಗೋವಿಂದ
ನರಹರಿ ನಾರಾಯಣ ನಾರಾಯಣ ಗೋವಿಂದ

ಪುಟ್ಟನಾಗಿ ಮಹಿಕೊಟ್ಟ ಬಲಿಯ ತಲೆ
ಮೆಟ್ಟಿ ತುಳಿದ ದಯದಿಂದ
ಧಾತ್ರಿಯೊಳು ಮುನಿ ಪುತ್ರನಾಗಿ ಬಂದು
ಕ್ಷತ್ರಿಯರೆಲ್ಲರ ಕೊಂದ

ನಾರಾಯಣ ನಾರಾಯಣ ಗೋವಿಂದ
ಹರಿ ನಾರಾಯಣ ನಾರಾಯಣ ಗೋವಿಂದ
ವಾಮನ ನಾರಾಯಣ ನಾರಾಯಣ ಗೋವಿಂದ
ಭಾರ್ಗವ ನಾರಾಯಣ ನಾರಾಯಣ ಗೋವಿಂದ

ಮಡದಿಗಾಗಿ ಸರಗಡಲನೆ ಕಟ್ಟಿ
ಹಿಡಿದು ರಾವಣನ ಕೊಂದ
ಗೋಕುಲದಿ ಪುಟ್ಟಿ ಗೋವಳನೆ ಕಾಯ್ದ
ಗೋಪಾಲಕೃಷ್ಣ ತಾ ಬಂದ

ನಾರಾಯಣ ನಾರಾಯಣ ಗೋವಿಂದ
ಹರಿ ನಾರಾಯಣ ನಾರಾಯಣ ಗೋವಿಂದ
ರಾಮ ನಾರಾಯಣ ನಾರಾಯಣ ಗೋವಿಂದ

ಕೃಷ್ಣ ನಾರಾಯಣ ನಾರಾಯಣ ಗೋವಿಂದ

ಛಲದಲಿ ತ್ರಿಪುರರ ಸತಿಯರ ವ್ರತದ
ಫಲವನಳಿದ ಮುದದಿಂದ
ಧರೆಯೊಳು ಪರಮಾ ನೀಚರ ಸವರಿ
ಕುದುರೆಯೇರಿದ ಕಲ್ಕಿ ಚಂದ

ನಾರಾಯಣ ನಾರಾಯಣ ಗೋವಿಂದ
ಹರಿ ನಾರಾಯಣ ನಾರಾಯಣ ಗೋವಿಂದ
ಬುದ್ಧ ನಾರಾಯಣ ಗೋವಿಂದ
ಕಲ್ಕಿ ನಾರಾಯಣ ಗೋವಿಂದ
ದೋಷದೂರ ಶ್ರೀ ಪುರಂದರ ವಿಠಲ
ಪೋಷಿತ ಭಕ್ತ ಸುವೃಂದ ||
--------------------------------------
ಬಿಡೆನೋ ನಿನ್ನಂಘ್ರಿ ಶ್ರೀನಿವಾಸ, ಎನ್ನ ದುಡಿಸಿಕೊಳ್ಳೆಲೋ ಶ್ರೀನಿವಾಸ
ನಿನ್ನುಡಿಯೇ ಜಿತಲ್ಲೋ ಶ್ರೀನಿವಾಸ,
ಎನ್ನ ನಡೆ ತಪ್ಪು ಕಾಯೋ ಶ್ರೀನಿವಾಸ ||ಪ||

ಬಡಿಯೋ ಬೆನ್ನಲ್ಲಿ ಶ್ರೀನಿವಾಸ ನನ್ನೊಡಲ
ಹೊಯ್ಯದಿರೊ ಶ್ರೀನಿವಾಸ
ನಾ-ಬಡವ ಕಾಣೆಲೋ ಶ್ರೀನಿವಾಸ,
ನಿನ್ನೊಡಲ ಹೊಕ್ಕೆನೊ ಶ್ರೀನಿವಾಸ || ೧ ||

ಪಂಜು ವಿಡಿವೆನೊ ಶ್ರೀನಿವಾಸ ನಿನ್-
ಎಂಜಲ ಬಳಿದುಂಬೆ ಶ್ರೀನಿವಾಸ
ನಾಸಂಜೆ  ಉದಯಕೆ ಶ್ರೀನಿವಾಸ ,
ಕಾಳಂಜೆಯ ಪಿಡಿವೆ ಶ್ರೀನಿವಾಸ || ೨ ||

ಸತ್ತಿಗೆ ಚಾಮರ ಶ್ರೀನಿವಾಸ
ನಾ-ನೆತ್ತಿ ಕುಣಿವೆನೋ ಶ್ರೀನಿವಾಸ
ನಿನ್ನ -ರತ್ನದ ಹಾವಿಗೆ ಶ್ರೀನಿವಾಸ ,
ನಾ-ಹೊತ್ತು ನಲಿವೆನೋ ಶ್ರೀನಿವಾಸ || ೩ ||

ಹೇಳಿದಂತಾಲಿಹೆ ಶ್ರೀನಿವಾಸ
ನಿನ್ನಾಳಿಗಳಾಗಿಹೆ ಶ್ರೀನಿವಾಸ
ಅವ-ರೂಳಿಗವ ಮಾಳ್ಪೆ ಶ್ರೀನಿವಾಸ,
ನನ್ನ ಪಾಲಿಸೋ ಬಿಡದೆ ಶ್ರೀನಿವಾಸ || ೪ ||

ನಿನ್ನ  ನಾಮ ಹೋಳಿಗೆ ಶ್ರೀನಿವಾಸ |
ಕಳ್ಳ- ಕುನ್ನಿ ನಾನಾಗಿಹೆ ಶ್ರೀನಿವಾಸ
ಕಟ್ಟಿ-ನಿನ್ನವರೊದ್ದರೆ ಶ್ರೀನಿವಾಸ ,
ನನಗಿನ್ನು ಲಜ್ಜೇತಕೆ ಶ್ರೀನಿವಾಸ || ೫ ||

ಬೀಸಿ ಕೊಳ್ಳಲವರೆ ಶ್ರೀನಿವಾಸ,
ಮುದ್ರೆ ಕಾಸಿ ಚುಚ್ಚಲವರೆ ಶ್ರೀನಿವಾಸ
ಮಿಕ್ಕ ಘಾಸಿಗೆ ನಾನಂಜೆನಯ್ಯ ಶ್ರೀನಿವಾಸ
ಎಂಜಲಾಸೆಯ ಭಂಟ  ನಾ ಶ್ರೀನಿವಾಸ || ೬||

ಹೇಸಿ ನಾನಾಧರೆ ಶ್ರೀನಿವಾಸ ,
ಹರಿ-ಧಾಸರೊಳು ಪೊಕ್ಕೆ ಶ್ರೀನಿವಾಸ
ಅವರ-ಭಾಷೆಯ ಕೇಳಿಹೆ ಶ್ರೀನಿವಾಸ ,
ಆವಾಸಿಯ ಸೈರಿಸೊ ಶ್ರೀನಿವಾಸ || ೭ ||

ತಿಂಗಳವನಲ್ಲ ಶ್ರೀನಿವಾಸ ,
ವತ್ಸ-ರಂಗಳವನಲ್ಲ ಶ್ರೀನಿವಾಸ
ರಾಜಂಗಳ ಸವದಿಪೆ ಶ್ರೀನಿವಾಸ ,

ಭವಂಗಳ ಧಾಟುವೆ ಶ್ರೀನಿವಾಸ || ೮ ||

ನಿನ್ನವ ನಿನ್ನವ ಶ್ರೀನಿವಾಸ,
ನಾನನ್ಯರನರಿಯೆನೊ ಶ್ರೀನಿವಾಸ
ಅಯ್ಯ- ಮನ್ನಿಸೋ ತಾಯ್ತಂದೆ ಶ್ರೀನಿವಾಸ
ಪ್ರಸನ್ನ ವೆಂಕಟಾದ್ರಿ ಶ್ರೀನಿವಾಸ || ೯ ||

--------------------------------------

ಶ್ರೀ ಶ್ರೀನಿವಾಸಾ ಗೋವಿಂದಾ
ಶ್ರೀ ವೇಂಕಟೇಶಾ ಗೋವಿಂದಾ
ಭಕ್ತವತ್ಸಲಾ ಗೋವಿಂದಾ
ಭಾಗವತಪ್ರಿಯ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧ ||

ನಿತ್ಯನಿರ್ಮಲಾ ಗೋವಿಂದಾ
ನೀಲಮೇಘಶ್ಯಾಮ ಗೋವಿಂದಾ
ಪುರಾಣಪುರುಷಾ ಗೋವಿಂದಾ
ಪುಂಡರೀಕಾಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨ ||

ನಂದನಂದನಾ ಗೋವಿಂದಾ
ನವನೀತಚೋರಾ ಗೋವಿಂದಾ
ಪಶುಪಾಲಕ ಶ್ರೀ ಗೋವಿಂದಾ
ಪಾಪವಿಮೋಚನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೩ ||

ದುಷ್ಟಸಂಹಾರ ಗೋವಿಂದಾ
ದುರಿತನಿವಾರಣ ಗೋವಿಂದಾ
ಶಿಷ್ಟಪರಿಪಾಲಕ ಗೋವಿಂದಾ
ಕಷ್ಟನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೪ ‖

ವಜ್ರಮಕುಟಧರ ಗೋವಿಂದಾ
ವರಾಹಮೂರ್ತಿವಿ ಗೋವಿಂದಾ
ಗೋಪೀಜನಪ್ರಿಯ ಗೋವಿಂದಾ
ಗೋವರ್ಧನೋದ್ಧಾರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೫ ‖

ದಶರಥನಂದನ ಗೋವಿಂದಾ
ದಶಮುಖಮರ್ದನ ಗೋವಿಂದಾ
ಪಕ್ಷಿವಾಹನಾ ಗೋವಿಂದಾ
ಪಾಂಡವಪ್ರಿಯ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೬ ‖

ಮತ್ಸ್ಯಕೂರ್ಮ ಗೋವಿಂದಾ
ಮಧುಸೂಧನ ಹರಿ ಗೋವಿಂದಾ
ವರಾಹ ನರಸಿಂಹ ಗೋವಿಂದಾ
ವಾಮನ ಭೃಗುರಾಮ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೭ ‖

ಬಲರಾಮಾನುಜ ಗೋವಿಂದಾ
ಬೌದ್ಧ ಕಲ್ಕಿಧರ ಗೋವಿಂದಾ
ವೇಣುಗಾನಪ್ರಿಯ ಗೋವಿಂದಾ
ವೇಂಕಟರಮಣಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೮ ||

ಸೀತಾನಾಯಕ ಗೋವಿಂದಾ
ಶ್ರಿತಪರಿಪಾಲಕ ಗೋವಿಂದಾ
ಶ್ರಿತಜನಪೋಷಕ ಗೋವಿಂದಾ
ಧರ್ಮಸಂಸ್ಥಾಪಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೯ ||

ಅನಾಥರಕ್ಷಕ ಗೋವಿಂದಾ
ಆಪದ್ಬಾಂದವ ಗೋವಿಂದಾ
ಭಕ್ತವತ್ಸಲಾ ಗೋವಿಂದಾ
ಕರುಣಾಸಾಗರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧೦ ||

ಕಮಲದಳಾಕ್ಷ ಗೋವಿಂದಾ
ಕಾಮಿತಫಲದಾತ ಗೋವಿಂದಾ
ಪಾಪವಿನಾಶಕ ಗೋವಿಂದಾ
ಪಾಹಿ ಮುರಾರೇ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧೧ ||

ಶ್ರೀ ಮುದ್ರಾಂಕಿತ ಗೋವಿಂದಾ
ಶ್ರೀ ವತ್ಸಾಂಕಿತ ಗೋವಿಂದಾ
ಧರಣೀನಾಯಕ ಗೋವಿಂದಾ
ದಿನಕರತೇಜಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧೨ ||

ಪದ್ಮಾವತೀಪ್ರಿಯ ಗೋವಿಂದಾ
ಪ್ರಸನ್ನಮೂರ್ತೀ ಗೋವಿಂದಾ
ಅಭಯಹಸ್ತ ಗೋವಿಂದಾ
ಮತ್ಸ್ಯಾವತಾರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧೩ ||

ಶಂಖಚಕ್ರಧರ ಗೋವಿಂದಾ
ಶಾರ್ಙ್ಗಗದಾಧರ ಗೋವಿಂದಾ
ವಿರಾಜಾತೀರ್ಥಸ್ಥ ಗೋವಿಂದಾ
ವಿರೋಧಿಮರ್ಧನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧೪ ||

ಸಾಲಗ್ರಾಮ[ಧರ] ಗೋವಿಂದಾ
ಸಹಸ್ರನಾಮಾ ಗೋವಿಂದಾ
ಲಕ್ಷ್ಮೀವಲ್ಲಭ ಗೋವಿಂದಾ
ಲಕ್ಷ್ಮಣಾಗ್ರಜ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೧೫ ||

ಕಸ್ತೂರಿತಿಲಕ ಗೋವಿಂದಾ
ಕನಕಾಂಬರಧರ ಗೋವಿಂದಾ
ಗರುಡವಾಹನಾ ಗೋವಿಂದಾ
ಗಜರಾಜ ರಕ್ಷಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ  || ೧೬ ||

ವಾನರಸೇವಿತ ಗೋವಿಂದಾ
ವಾರಧಿಬಂಧನ ಗೋವಿಂದಾ
ಏಕಸ್ವರೂಪ ಗೋವಿಂದಾ
ರಾಮಕೃಷ್ಣಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ  || ೧೭ ||

ಭಕ್ತನಂದನ ಗೋವಿಂದಾ
ಪ್ರತ್ಯಕ್ಷದೇವಾ ಗೋವಿಂದಾ
ಪರಮದಯಾಕರ ಗೋವಿಂದಾ
ವಜ್ರಕವಚಧರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ  || ೧೮ ||

ವೈಜಯಂತಿಮಾಲ ಗೋವಿಂದಾ
ವಡ್ಡಿಕಾಸುಲ ಗೋವಿಂದಾ
ವಸುದೇವಸುತ ಗೋವಿಂದಾ
ಶ್ರೀವಾಸುದೇವ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ  || ೧೯ ||

ನಿತ್ಯಕಳ್ಯಾಣ ಗೋವಿಂದಾ
ನೀರಜನಾಭ ಗೋವಿಂದಾ
ನೀಲಾದ್ರಿವಾಸ ಗೋವಿಂದಾ
ನೀಲಮೇಘಶ್ಯಾಮ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೨೦ ‖

ಸ್ವಯಂ ಪ್ರಕಶ ಗೋವಿಂದಾ
ಆನಮ್ದನಿಲಯ ಗೋವಿಂದಾ
ಶ್ರೀದೇವಿನಾಥ ಗೋವಿಂದಾ
ದೇವಕಿ ನಂದನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೨೧ ‖

ತಿರುಮಲವಾಸ ಗೋವಿಂದಾ
ರತ್ನಕಿರೀಟ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ
ನಿತ್ಯಶುಭಪ್ರದ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೨೨ ‖

ಆನಂದರೂಪ ಗೋವಿಂದಾ
ಆದ್ಯಂತರಹಿತ ಗೋವಿಂದಾ
ಇಹಪರ ದಾಯಕ ಗೋವಿಂದಾ
ಇಭರಾಜ ರಕ್ಷಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೨೩ ‖

ಪದ್ಮದಲಾಕ್ಷ ಗೋವಿಂದಾ
ತಿರುಮಲನಿಲ್ಯ ಗೋವಿಂದಾ
ಶೇಷಶಾಯಿನೀ ಗೋವಿಂದಾ
ಶೇಷಾದ್ರಿನಿಲಯ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨೪ ||

ವರಾಹ ರೂಪ ಗೋವಿಂದಾ
ಶ್ರೀ ಖೂರ್ಮರೂಪ ಗೋವಿಂದಾ
ವಾಮನ ರೂಪ ಗೋವಿಂದಾ
ನರಹರಿ ರೂಪ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨೫ ||

ಶ್ರೀ ಪರಶುರಾಮ ಗೋವಿಂದಾ
ಶ್ರೀ ಬಲರಾಮ ಗೋವಿಂದಾ
ರಘುಕುಲ ರಾಮ ಗೋವಿಂದಾ
ಶ್ರೀ ರಾಮಕೃಷ್ಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨೬ ||

ತಿರುಮಲನಾಯಕ ಗೋವಿಂದಾ
ಶ್ರಿತಜನಪೋಷಕ ಗೋವಿಂದಾ
ಶ್ರೀದೇವಿನಾಥ ಗೋವಿಂದಾ
ಶ್ರೀವತ್ಸಾಂಕಿತ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨೭ ||

ಗೋವಿಂದಾನಾಮ ಗೋವಿಂದಾ
ವೇಂಕಟರಮಣಾ ಗೋವಿಂದಾ
ಕ್ಷೇತ್ರಪಾಲಕ ಗೋವಿಂದಾ
ತಿರುಮಲನಥ ಗೋವಿಂದಾ |
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨೮ ||

ವಾನರಸೇವಿತ ಗೋವಿಂದಾ
ವಾರಧಿಬಂಧನ ಗೋವಿಂದಾ
ಏಡುಕೊಂಡಲವಾಡ ಗೋವಿಂದಾ
ಏಕತ್ವರೂಪಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೨೯ ||

ಶ್ರೀ ರಾಮಕೃಷ್ಣಾ ಗೋವಿಂದಾ
ರಘುಕುಲ ನಂದನ ಗೋವಿಂದಾ
ಪ್ರತ್ಯಕ್ಷದೇವಾ ಗೋವಿಂದಾ
ಪರಮದಯಾಕರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೩೦ ||

ವಜ್ರಕವಚಧರ ಗೋವಿಂದಾ
ವೈಜಯಂತಿಮಾಲ ಗೋವಿಂದಾ
ವಡ್ಡಿಕಾಸುಲವಾಡ ಗೋವಿಂದಾ
ವಸುದೇವತನಯಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೩೧ ||

ಬಿಲ್ವಪತ್ರಾರ್ಚಿತ ಗೋವಿಂದಾ
ಭಿಕ್ಷುಕ ಸಂಸ್ತುತ ಗೋವಿಂದಾ
ಸ್ತ್ರೀಪುಂಸರೂಪಾ ಗೋವಿಂದಾ
ಶಿವಕೇಶವಮೂರ್ತಿ ಗೋವಿಂದಾ
ಬ್ರಹ್ಮಾಂಡರೂಪಾ ಗೋವಿಂದಾ
ಭಕ್ತರಕ್ಷಕ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೩೨ ‖

ನಿತ್ಯಕಳ್ಯಾಣ ಗೋವಿಂದಾ
ನೀರಜನಾಭ ಗೋವಿಂದಾ
ಹಾತೀರಾಮಪ್ರಿಯ ಗೋವಿಂದಾ
ಹರಿ ಸರ್ವೋತ್ತಮ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೩೩ ‖

ಜನಾರ್ಧನಮೂರ್ತಿ ಗೋವಿಂದಾ
ಜಗತ್ಸಾಕ್ಷಿರೂಪಾ ಗೋವಿಂದಾ
ಅಭಿಷೇಕಪ್ರಿಯ ಗೋವಿಂದಾ
ಆಪನ್ನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ ‖ ೩೪ ‖

ರತ್ನಕಿರೀಟಾ ಗೋವಿಂದಾ
ರಾಮಾನುಜನುತ ಗೋವಿಂದಾ
ಸ್ವಯಂಪ್ರಕಾಶಾ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ

ಗೋಕುಲನಂದನ ಗೋವಿಂದಾ || ೩೫ ||

ನಿತ್ಯಶುಭಪ್ರದ ಗೋವಿಂದಾ
ನಿಖಿಲಲೋಕೇಶಾ ಗೋವಿಂದಾ
ಆನಂದರೂಪಾ ಗೋವಿಂದಾ
ಆದ್ಯಂತರಹಿತಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೩೬ ||

ಇಹಪರ ದಾಯಕ ಗೋವಿಂದಾ
ಇಭರಾಜ ರಕ್ಷಕ ಗೋವಿಂದಾ
ಪರಮದಯಾಳೋ ಗೋವಿಂದಾ
ಪದ್ಮನಾಭಹರಿ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೩೭ ||

ತಿರುಮಲವಾಸಾ ಗೋವಿಂದಾ
ತುಲಸೀವನಮಾಲ ಗೋವಿಂದಾ
ಶೇಷಾದ್ರಿನಿಲಯಾ ಗೋವಿಂದಾ
ಶೇಷಸಾಯಿನೀ ಗೋವಿಂದಾ
ಶ್ರೀ ಶ್ರೀನಿವಾಸಾ ಗೋವಿಂದಾ
ಶ್ರೀ ವೇಂಕಟೇಶಾ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ || ೩೮ ||

---

ಸಾಟಿಯುಂಟೆ ಶ್ರೀನಿವಾಸನ ದಾಸ ಕೂಟದ ಮ್ಯಾಳಕೆ
ಬೂಟಕದ ಮಾತಲ್ಲ ಕೇಳಿರೊ ಭಜನೆ ಮಾಡುವ ತಾಳಕೆ |ಪ|

ವಾಸುದೇವನ ವರ್ಣಿಸಲು ಕಮಲಾಸನಾದಿ ಸುರೇಂದ್ರರು
ದಾಸ ಜನರ ಸಮೂಹದಳೊಗಾವಾಸವಾಗುತ ನಲಿವರು
ಸೂಸುತಿಹ ಗಂಗಾದಿ ನದಿಗಳು ಬ್ಯಾಸರದೆ ಬಂದಿರುವುವು
ಕೇಶವನ ಕೊಂಡಾಟ ಧರೆಯೊಳು ಮೀಸಲಳಿಯದ ಮಧುರವು | ೧ |

ಬಾರಿಸುತ ತಂಬೂರಿ ತಾಳವ ನಾರದರ ಸಂಸ್ಮರಿಸುತ
ಭೂರಿ ಕಿಂಕಿಣಿ ಮದ್ದಳೆಯ ಶೃಂಗಾರ ರಸವನು ಸುರಿಸುತ
ವಾರಿಜಾಕ್ಷನ ಪರಮ ಮಂಗಳ ಮೂರುತಿಯ ಮುಂದಿರಿಸುತ
ಮಾರುತನ ಮತವರಿತು ಬಹು ಗಂಭೀರ ಸ್ವರದಿಂದರುಹುತ | ೨ |

ಹಿಂದೆಗಳಿಸಿದ ಹಲವು ದುರಿತವು ಕುಂದುವುದು ನಿಮಿಷಾರ್ಧದಿ
ಅಂದಿನಂದಿನ ದೋಷ ದುಷ್ಕೃತ ಒಂದು ನಿಲ್ಲದು ಕಡೆಯಲಿ
ಇಂದಿರಾಧವ ಶೇಷಭೂಧರ ಮಂದಿರನು ಮಹ ಹರುಷದಿ
ಮುಂದೆ ನಲಿವುತ ಮನಕೆ ಪೂರ್ಣಾನಂದವೀವನು ನಗುತಲಿ | ೩ |

-------------------------------------

ವಾರಿಜ ಲಯಪತೆ ವಾರಿಜನಾಭನೆ ,
ವಾರಿಜಭವಪಿತ ವಾರಿಜನೇತ್ರನೆ
ವಾರಿಜಮಿತ್ರ ಅಪಾರಪ್ರಭಾವನೆ ,
ವಾರಿಜಜಾಂಡದ ಕಾರಣದೊರೆಯೇ
ಬಾರೈಯ್ಯ ಬಾ ಬಾ ಬಾ ಬಾಬಾ (೫)
ಭಕುಥರಪ್ರಿಯಾ ಶ್ರೀನಿವಾಸರಾಯ ||

ಮಾರಜನಕಮುಕುತಾರೊಡೆಯ , ದೇವೈಯ್ಯ ಜೀಯ್ಯ
ಬಾರೈಯ್ಯ ಬಾಬಾಬಾಬಾಬಾಬಾಬಾಬಾ(೯)
ಭಕುಥರಪ್ರಿಯಾ ಶ್ರೀನಿವಾಸರಾಯ|

ಸ್ಯಂದನವೇರಿಬಾಪ್ಪಾ ರಂಗ ,
ದೇವೋತ್ತುಂಗಾ ನಂದಾ ನಂದನ ಅರಿಮದಭಂಗ,
ಕರುಣಾಪಾಂಗ ಸಿಂಧು,, ಶಯನ ಸುಂದರಾಂಗ
ಹೇ ನಾರಸಿಂಗ |

ಕಂದವಿರಂಚಿಯು ನಂದಿವಾಹನ
ಅಮರೇಂದ್ರ ಸನಕ, ಸನಂ-ದನಾದಿಮುನಿ ವೃಂದ ನಿಂದುಬಂದು ಧಿಂ ಧಿಂ ಧಿಮಿಕೆಂದು
ನಿಂದಾಡಲು ಆನಂದದಿ ಮನೆಗೆ ||೧||
ಬಾರೈಯ್ಯ ಬಾಬಾಬಾಬಾಬಾಬಾಬಾಬಾಬಾ(೯) ||

ಜಗ್ಗಜ್ಜನ್ಮಾ ದಿ ಕರ್ತಾ ಗೋವಿಂದಾ ಉದರದಿಲೋಕ ಲಗುವಾಗಿಧರಿಸೀದಾ ಮುಕುಂದ
ಭಕ್ತರ ಮನಕೆ, ಝುಗಝುಗಿಸುತ ಪೊಳೆವಾನಂದ, ನಿಗಮಾವಳಿಯಿಂದ
ಅಗಣಿತ ಮುನಿಗಳು ನಗ ಖಗ ಮೃಗ ಶಶಿ
ಗಗನಮನ್ಯಾದ್ಯರು ಸೊಗಸಾಗಿ
ಬಗೆಬಗೆ ಪೊಗಳುತಲಿ ಬೇಗ ಜಿಗಿಜಿಗಿದಾಡಲು
ಮುಗುಳುನಗೆಯ ಮಹ ಉರಗ ಗಿರಿವಾಸ ||೨||

ಬಾರೈಯ್ಯ ಬಾಬಾಬಾಬಾಬಾಬಾಬಾಬಾಬಾ(೯)
ಭಕುಥರಪ್ರಿಯಾ ಶ್ರೀನಿವಾಸರಾಯ

ತಡಮಾಡಬ್ಯಾಡವೋ ಹೇ ನಲ್ಲ,
ವಾಕುಲಾಲಿಸೆನ್ನೊಡೆಯ ಗೋಪಾಲವಿಠಲ
ದೇವ ಪರಾಕು ಅಡಿ ಇಡು ಭಕ್ತವತ್ಸಲ ಶ್ರೀ ಲಕುಮೀ ನಲ್ಲ,
ಮಡುವಿನೊಳಗೆ ಗಜ ಮೊರೆಯಿಡಲಾಕ್ಷಣ
ಮಡದಿಗೆ ಹೇಳದೆ ದುಡದುಡನೆ ಬಂದು
ಹಿಡಿದು ನಕ್ರನ ಬಾಯ ಕಡಿದು ಬಿಡಿಸಿದನೆ
ಸಡಗರದಲಿ ರಮೆ ಪೊಡವಿ ಒಡಗೂಡಿ ||೩||

ಬಾರೈಯ್ಯ ಬಾಬಾಬಾಬಾಬಾಬಾಬಾಬಾಬಾ(೯)
ಭಕುಥರಪ್ರಿಯಾ ಶ್ರೀನಿವಾಸರಾಯ||
ವಾರಿಜ ಲಯಪತೆ ವಾರಿಜನಾಭನೆ ,
ವಾರಿಜಭವಪಿತ ವಾರಿಜನೇತ್ರನೆ
ವಾರಿಜಮಿತ್ರ ಅಪಾರಪ್ರಭಾವನೆ ,
ವಾರಿಜಜಾಂಡದ ಕಾರಣದೊರೆಯೇ, ಬಾರೈಯ್ಯ ಬಾ (೫)
ಭಕುಥರಪ್ರಿಯಾ ಶ್ರೀನಿವಾಸರಾಯ ,ಶ್ರೀನಿವಾಸರಾಯ, ಹೇ ಶ್ರೀನಿವಾಸರಾಯ ||

---------------------------------------------------

ಜೈ ಜೈ ರಾಮ ಹರೇ ಜೈ ಜೈ ಕೃಷ್ಣ ಹರೇ ||
ರಾಮ ರಾಮ ಹರೇ ಕೃಷ್ಣ ಕೃಷ್ಣ ಹರೆ ||

ಕೌಸಲ್ಯಜ ವರ ವಂಶೋದ್ಭವ ಸುರ
ಸಂಸೇವಿತ ಪದ ರಾಮ ಹರೇ
ಕಂಸಾದ್ಯಸುರರ ಧ್ವಂಸಗೈದ ಯದು
ವಂಶೋದ್ಭವ ಶ್ರೀ ಕೃಷ್ಣ ಹರೇ ||೧||

ಮುನಿಮಖ ರಕ್ಷಕ ದನುಜರ ಶಿಕ್ಷಕ
ಫಣಿಧರ ಸನ್ನುತ ರಾಮ ಹರೇ
ಘನವರ್ಣಾಂಗ ಸುಮನಸರೊಡೆಯ
ಶ್ರೀ ವನಜಾಸನ ಪಿತ ಕೃಷ್ಣ ಹರೇ ||೨||

ತಾಟಕಿ ಖರಮಧುಕೈಟಭಾರಿ
ಪಾಪಾಟವಿ ಸುರಮುಖ ರಾಮ ಹರೇ
ಆಟದಿ ಫಣಿ ಮ್ಯಾಲ್ ನಾಟ್ಯವನಾಡಿದ
ಖೇಟವಾಹ ಶ್ರೀ ಕೃಷ್ಣ ಹರೇ || ೩||

ಶಿಲೆಯ ಪಾದರಜದಲಿ ಸ್ತ್ರೀ ಮಾಡಿದ
ಸುಲಲಿತ ಗುನನಿಧಿ ರಾಮ ಹರೇ
ಬಲು ವಕ್ರಾಗಿದ್ದ ಅಬಲೆಯ ಕ್ಷಣದಲಿ
ಚೆಲುವೆಯ ಮಾಡಿದ ಕೃಷ್ಣ ಹರೇ ||೪||

ಹರ ಧನು ಭಂಗಿಸಿ ಹರುಷದಿ ಜಾನಕಿ
ಕರವ ಪಿಡಿದ ಶ್ರೀ ರಾಮ ಹರೇ
ಸಿರಿ ರುಕ್ಮಿಣಿಯನು ತ್ವರದಲಿ ವರಿಸಿದ
ಶರಣರ ಪಾಲಕ ಕೃಷ್ಣ ಹರೇ ||೫||

ಜನಕ ಪೇಳೆ ಲಕ್ಷ್ಮಣ ಸೀತಾ ಸಹ
ವನಕೆ ತೆರಳಿದ ರಾಮ ಹರೇ
ವನಕೆ ಪೋಗಿ ತನ್ನಣುಗರೊಡನೆ
ಗೋವನು ಪಾಲಿಪ ಶ್ರೀ ಕೃಷ್ಣ ಹರೇ ||೬||

ಚದುರೆ ಶಬರಿಯಿತ್ತ ಬದರಿಯ ಫಲವನು
ಮುದದಿ ಸೇವಿಸಿದ ಶ್ರೀ ರಾಮ ಹರೇ
ವಿದುರನ ಕ್ಷೀರಕೆ ಒದಗಿಪೋದ
ಪದುಮನಾಭ ಶ್ರೀ ಕೃಷ್ಣ ಹರೇ ||೭||

ಸೇವಿತ ಹನುಮ ಸುಗ್ರೀವನ ಸಖ
ಜಗತ್ಪಾವನ ಪರತರ ರಾಮ ಹರೇ
ದೇವಕಿ ವಸುದೇವರ ಸೆರೆ ಬಿಡಿಸಿದ
ದೇವ ದೇವ ಶ್ರೀ ಕೃಷ್ಣ ಹರೇ ||೮||

ಧರೆಯೊಳಗಜ್ಞಜನರ ಮೋಹಿಪುದಕೆ
ಹರನ ಪೂಜಿಸಿದ ಶ್ರೀ ರಾಮ ಹರೇ
ಹರನ ಪ್ರಾರ್ಥಿಸಿ ವರವನು ಪಡೆದ
ಚರಿತೆ ಅಗಾಧವು ಕೃಷ್ಣ ಹರೇ ||೯||

ಗಿರಿಗಳಿಂದವರ ಶರಧಿಯ ಬಂಧಿಸಿದ
ಪರಮ ಸಮರ್ಥ ಶ್ರೀ ರಾಮ ಹರೇ
ಗಿರಿಯನು ತನ್ನ ಕಿರಿ ಬೆರಳಲೆತ್ತಿ
ಗೋಪರನ ಕಾಯ್ದ ಶ್ರೀ ಕೃಷ್ಣ ಹರೇ ||೧೦||

ಖಂಡಿಸಿ ದಶಶಿರ ಚೆಂಡಾಡಿದ
ಕೋದಂಡಪಾಣಿ ಶ್ರೀ ರಾಮ ಹರೇ
ಪಾಂಡು ತನಯರಿಂ ಚಂಡ ಕೌರವರ

ದಿಂಡು ಗೆಡಹಿದ ಕೃಷ್ಣ ಹರೇ ||೧೧ ||

ತವಕದಲ್ ಅಯೋಧ್ಯಾಪುರಕ್ಕೈದಿದ
ತನ್ನ ಯುವತಿಯೊಡನೆ ಶ್ರೀ ರಾಮಹರೇ
ರವಿಸುತತನಯಗೆ ಪಟ್ಟವ ಕಟ್ಟಿದ
ಭವತಾರಕ ಶ್ರೀ ಕೃಷ್ಣ ಹರೇ ||೧೨||

ಭರತನು ಪ್ರಾರ್ಥಿಸಲರಸತ್ವವ
ಸ್ವೀಕರಿಸಿದ ತ್ವರದಲಿ ರಾಮ ಹರೇ
ವರಧರ್ಮಾದ್ಯರ ಧರೆಯೊಳು ಮೆರೆಸಿದ
ಪರಮ ಕೃಪಾಕರ ಕೃಷ್ಣ ಹರೇ ||೧೩||

ಅತುಳ ಮಹಿಮ ಸದ್ ಯತಿಗಳ ಹೃದಯದಿ
ಸತತ ವಿರಾಜಿಪ ರಾಮ ಹರೇ
ಸಿತವಾಹನ ಸಾರಥಿಯೆನಿಸಿದ ಸುರತತಿ
ಪೂಜಿತ ಪದ ಕೃಷ್ಣ ಹರೇ || ೧೪||

ರಾಮರಾಮ ಎಂದು ನೇಮದಿ ಭಜಿಪರ
ಕಾಮಿತಫಲದ ಶ್ರೀ ರಾಮ ಹರೇ
ಪ್ರೇಮದಿ ಭಕ್ತರ ಪಾಲಿಪ ಶ್ರೀ
ವರದೇಶ ವಿಠಲ ಶ್ರೀ ಕೃಷ್ಣ ಹರೇ ||೧೫||
---------------------------------------
ನಂದೇನದೋ ಸ್ವಾಮಿ ನಿಂದೇ ಇದೆಲ್ಲವೂ ||ಪ||
ನಂದನಂದನ ಗೋವಿಂದ, ಹರೇ ಕೃಷ್ಣ ||ಅ.ಪ||

ಜನನ ಮರಣ ನಿಂದೇ, ಜನ್ಮಸಾಧನ ನಿಂದೇ
ಅನುಕೂಲಾದರವು ನಿಂದೇ ಸ್ವಮೀ
ತನುಮನವೂ ನಿಂದೇ, ಕಾಯ ದೊರೆವುದೂ ನಿಂದೇ

ಚಿನುಮಯರೂಪನೇ ಅನುಮಾನವ್ಯಾತಕೆ ||೧||

ಕಾಯಕಷ್ಟವು ನಿಂದೇ, ದೇಹದ ಬಲ ನಿಂದೇ
ನ್ಯಾಯ ಅನ್ಯಾಯವೂ ನಿಂದೇ,
ಬಾಯಿಮಾತು ನಿಂದೇ, ಬರುವ ಭಾಗ್ಯವು ನಿಂದೇ
ಕಾಯಜ ಪಿತ ನಿನ್ನ ಮಾಯಾ ತಿಳಿಯದಯ್ಯಾ ||೨||

ಯಾತ್ರೆ ತೀರ್ಥವು ನಿಂದೇ, ಕ್ಷೇತ್ರದ ಫಲ ನಿಂದೇ
ಸತ್ಪಾತ್ರ ದಾನ ನೇಮ ನಿಂದೇ,
ಧಾತ್ರಿಯೊಳ್ ಪರಿಪೂರ್ಣ ಕ್ಷೇತ್ರ ವೆಂಕಟವಿಠಲ
ಸ್ತೋತ್ರ ಮಾಳ್ಪುದು ವಿಚಿತ್ರ ನಿನ್ನದಯ್ಯಾ ||೩||

ವಂದಿತಾಶೇಷವಂದ್ಯೋರುವೃಂದಾರಕಂ
ಚಂದನಾಚರ್ಚಿತೋ ದಾರಪೀನಾಂಸಕಮ್ |
ಇಂದಿರಾಚಂಚಲಾಪಾಂಗನೀರಾಜಿತಂ
ಮಂದರೋದ್ಧಾರಿ ವೃತ್ತೋದ್ಭುಜಾಭೋಗಿನಂ |
---------------------------------------
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೧ ||

ಸೃಷ್ಟಿಸಂಹಾರಲೀಲಾವಿಲಾಸಾತತಂ
ಪುಷ್ಟಷಾಡ್ಗುಣ್ಯ ಸದ್ವಿಗ್ರಹೋಲ್ಲಾಸಿನಮ್ |
ದುಷ್ಟ ನಿಷೇಷಸಂಹಾರಕಮೋದ್ಯತಂ
ಹೃಷ್ಟಪುಷ್ಟಾನುತಿಶಿಷ್ಟ ಪ್ರಜಾಸಂಶ್ರಯಂ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೨ ||

ಉನ್ನತಪ್ರಾರ್ಥಿತಾಶೇಷಸಂಸಾಧಕಂ
ಸನ್ನತಾಲೌಕಿಕಾ ನಂದದ ಶ್ರೀಪದಮ್ |
ಭಿನ್ನಕರ್ಮಾಶಯಪ್ರಾಣಿಸಂಪ್ರೇರಕಂ
ತನ್ನಕಿಂನೇತಿ ವಿದ್ವತ್ಸು ಮಿಮಾಂಸಿತಂ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೩ ||

ವಿಪ್ರಮುಖ್ಯೈಃ ಸದಾವೇದವಾದೋನ್ಮುಖೈಃ
ಸುಪ್ರತಾಪೈಃ ಕ್ಷೀತಿಶೇಶ್ವರೈಶ್ಚಾರ್ಚಿತಂ |
ಅಪ್ರತರ್ಕ್ಯೋರುಸಂವಿದ್ಗುಣಂ ನಿರ್ಮಲಂ
ಸಪ್ರಕಾಶಾಜರಾನಂದ ರೂಪಂಪರಂ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೪ ||

ಅತ್ಯಯೋ ಯಸ್ಯಕೇನಾಪಿನಕ್ವಾಪಿಹಿ
ಪ್ರತ್ಯತೋ ಯದ್ಗುಣೇಷೂತ್ತಮಾನಾಂಪರಃ |
ಸತ್ಯಸಂಕಲ್ಪ ಏಕೋ ವರೇಣ್ಯೋ ವಶೀ
ಮತ್ಯನೂನೈಃ ಸದಾ ವೇದವಾದೋದಿತಃ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೫ ||

ಪಶ್ಯತಾಂ ದುಃಖಸಂತಾನನಿರ್ಮೂಲನಂ
ದೃಶ್ಯತಾಂ ದೃಶ್ಯತಾಮಿತ್ಯ ಜೇಶಾರ್ಚಿತಮ್
ನಶ್ಯತಾಂ ದೂರಗಂ ಸರ್ವದಾಪ್ಯಾತ್ಮಗಂ
ಪಶ್ಯತಾಂ ಸ್ವೇಚ್ಛಯಾ ಸಜ್ಜನೇಷ್ವಾಗತಂ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೬ ||

ಅಗ್ರಜಂ ಯಃ ಸಸರ್ಜಾಜಮಗ್ರ್ಯಾಕೃತಿಂ
ವಿಗ್ರಹೋಯಸ್ಯ ಸರ್ವೇಗುಣಾ ಏವ ಹಿ |
ಉಗ್ರ ಆದ್ಯೋऽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ
ಸದ್ಗೃಹೀತಃ ಸದಾ ಯಃ ಪರಂದೈವತಮ್ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೭ ||

ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ
ಪ್ರಚ್ಯುತೋऽಶೇಷ ದೋಷೈಃ ಸದಾಪೂರ್ತಿತಃ |
ಉಚ್ಯತೇ ಸವವೇದೋರು ವಾದೈರಜಃ ಸ್ವರ್ಚಿತೊ
ಬ್ರಹ್ಮರುದ್ರೇಂದ್ರ ಪೂರ್ವೈಸ್ಸದಾ |
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೮ ||

ಧಾರ್ಯತೇ ಯೇನ ವಿಶ್ವಂ ಸದಾಜಾದಿಕಂ
ವಾರ್ಯತೇ.ಅಶೇಷದುಃಖಂ ನಿಜಧ್ಯಾಯಿನಾಂ |
ಪಾರ್ಯತೇ ಸರ್ವಮನ್ಯೈರ್ನಯತ್ಪಾರ್ಯತೇ
ಕಾರ್ಯತೇ ಚಾಖಿಲಂ ಸರ್ವಭೂತೈಃ ಸದಾ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೯ ||

ಸರ್ವಪಾಪಾನಿ ಯತ್ಸಂಸ್ಮೃತೇಃ ಸಂಕ್ಷಯಂ

ಸರ್ವದಾ ಯಾಂತಿ ಭಕ್ತ್ಯಾ ವಿಶುದ್ಧಾತ್ಮನಾಂ |
ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ
ಕುರ್ವತೇ ಕರ್ಮ ಯತ್ಪ್ರೀತಯೆ ಸಜ್ಜನಾಃ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೧೦ ||

ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ
ಪ್ರಕ್ಷಯಂ ಯಾಂತಿ ದುಃಖಾನಿಃ ಯನ್ನಾಮತಃ |
ಅಕ್ಷರೋಯೋಽಜರಃ ಸರ್ವದೈವಾಮೃತಃ
ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಮ್ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೧೧ ||

ನಂದಿತೀರ್ಥೋರುಸನ್ನಾಮಿನೋ ನಂದಿನಃ
ಸಂದಧಾನಾಃ ಸದಾನಂದದೇವೇ ಮತಿಮ್ |
ಮಂದಹಾಸಾರುಣಾ ಪಾಂಗ ದತ್ತೋನ್ನತಿಂ
ನಂದಿತಾ ಶೇಷದೇವಾದಿ ವೃಂದಂ ಸದಾ |

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ
ಖಂಡಮಂಡನಂ ಪ್ರೀಣಯಾಮೋ ವಾಸುದೇವಂ || ೧೨ ||

---------------------------------------

ತೃತೀಯಂ ಸ್ತೋತ್ರಮ್
ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರ ಧಿಯಾ ಸತತಮ್ |
ಹರಿರೇವ ಪರೋ ಹರಿರೇವಗುರು ಹರಿರೇವ ಜಗತ್ಪಿತೃ ಮಾತೃಗತಿಃ || ೧ ||

ನತತೋಽಸ್ತ್ಯೈ ಪರಂ ಜಗದೀಡ್ಯ ತಮಂ ಪರಮಾತ್ ಪರತಃ ಪುರುಷೋತ್ತಮತಃ |

ತದಲಂ ಬಹುಲೋಕ ವಿಚಿಂತನಯಾ ಪ್ರಣವಂ ಕುರು ಮಾನಸಮೀಶ ಪದೇ || ೨ ||

ಯತತೋಽಪಿ ಹರೇಃ ಪದ ಸಂಸ್ಮರಣೇ ಸಕಲಂ ಹ್ಯಘಮಾಶು ಲಯಂ ವ್ರಜತಿ |
ಸ್ಮರತಸ್ತು ವಿಮುಕ್ತಿ ಪದಂ ಪರಮಂ ಸ್ಪುಟ ಮೇಷ್ಯತಿ ತತ್ ಕಿಮ ಪಾಕ್ರಿಯತೇ || ೩ ||

ಶೃಣು ತಾಮಲ ಸತ್ಯವಚಃ ಪರಮಂ ಶಪಥೇರಿತ ಮುಚ್ಛ್ರಿತ ಬಾಹು ಯುಗಮ್ |
ನಹರೇಃ ಪರಮೋ ನಹರೇಃ ಸದೃಶಃ ಪರಮಃ ಸತುಸರ್ವ ಚಿದಾತ್ಮಗಣಾತ್ || ೪ ||

ಯದಿ ನಾಮ ಪರೋ ನ ಭವೇತ್ ಸ ಹರಿಃ ಕಥಮಸ್ಯ ವಶೇ ಜಗದೇತದಭೂತ್ |
ಯದಿ ನಾಮ ನ ತಸ್ಯ ವಶೇ ಸಕಲಂ ಕಥಮೇವ ತು ನಿತ್ಯ ಸುಖಂ ನ ಭವೇತ್ || ೫ ||

ನ ಚ ಕರ್ಮ ವಿಮಾಮಲ ಕಾಲಗುಣ ಪ್ರಭೃತೀಶಮ ಚಿತ್ತನು ತದ್ಧಿ ಯತಃ |
ಚಿದಚಿತ್ತನು ಸರ್ವಮಸೌ ತು ಹರಿರ್ಯಮಯೇ ದಿತಿ ವೈದಿಕಮಸ್ತಿ ವಚಃ || ೬ ||

ವ್ಯವಹಾರಭಿದಾಽಪಿ ಗುರೋರ್ಜಗತಾಂ ನ ತು ಚಿತ್ತಗತಾ ಸಹಿ ಚೋದ್ಯಪರಮ್ |
ಬಹವಃ ಪುರುಷಾಃ ಪುರುಷಪ್ರವರೋ ಹರಿರಿತ್ಯವದತ್ ಸ್ವಯಮೇವ ಹರಿಃ || ೭ ||

ಚತುರಾನನ ಪೂರ್ವ ವಿಮುಕ್ತ ಗಣಾ ಹರಿಮೇತ್ಯ ತು ಪೂರ್ವ ವದೇವ ಸದಾ |
ನಿಯತೋಚ್ಚವಿನೀಚತ ಯೈವ ನಿಜಾಂ ಸ್ಥಿತಿಮಾಪುರಿತಿ ಸ್ಮ ಪರಂ ವಚನಮ್ || ೮ ||

ಆನಂದತೀರ್ಥ ಸನ್ನಾಮ್ನಾ ಪೂರ್ಣ ಪ್ರಜ್ಞಾಭಿ ಧಾಯುಜಾ |
ಕೃತಂ ಹರ್ಯಷ್ಟಕಂ ಭಕ್ತ್ಯಾ ಪಠತಃ ಪ್ರೀಯತೇ ಹರಿಃ || ೯ ||

||ಇತಿಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ತೃತೀಯ ಸ್ತೋತ್ರಮ್||

---------------------------------------

ಮತ್ಸ್ಯಕರೂಪ ಲಯೋದವಿಹಾರಿನ್ ವೇದವಿನೇತ್ರ ಚತುರ್ಮುಖವನ್ದ್ಯ |
ಕೂರ್ಮಸ್ವರೂಪಕ ಮನ್ದರಧಾರಿನ್ ಲೋಕವಿಧಾರಕ ದೇವವರೇಣ್ಯ || ೧||

ಸೂಕರರೂಪಕ ದಾನವಶತ್ರೋ ಭೂಮಿವಿಧಾರಕ ಯಜ್ಞಾವರಾಂಗ |
ದೇವ ನೃಸಿಂಹ ಹಿರಣ್ಯಕಶತ್ರೋ ಸರ್ವ ಭಯಾನ್ತಕ ದೈವತಬನ್ಧೋ || ೨||

ವಾಮನ ವಾಮನ ಮಾಣವವೇಷ ದೈತ್ಯವರಾನ್ತಕ ಕಾರಣರೂಪ |
ರಾಮ ಭೃಗೂದ್ವಹ ಸೂರ್ಜಿತದೀಪ್ತೇ ಕ್ಷತ್ರಕುಲಾನ್ತಕ ಶಮ್ಭುವರೇಣ್ಯ || ೩||

ರಾಘವ ರಾಘವ ರಾಕ್ಷಸ ಶತ್ರೋ ಮಾರುತಿವಲ್ಲಭ ಜಾನಕಿಕಾನ್ತ |
ದೇವಕಿನನ್ದನ ನನ್ದಕುಮಾರ ವೃನ್ದಾವನಾಂಚನ ಗೋಕುಲಚನ್ದ್ರ || ೪||

ಕನ್ದಫಲಾಶನ ಸುನ್ದರರೂಪ ನನ್ದಿತಗೋಕುಲವನ್ದಿತಪಾದ |
ಇನ್ದ್ರಸುತಾವಕ ನನ್ದಕಹಸ್ತ ಚನ್ದನಚರ್ಚಿತ ಸುನ್ದರಿನಾಥ || ೫||
ಇನ್ದೀವರೋದರ ದಳನಯನ ಮನ್ದರಧಾರಿನ್ ಗೋವಿನ್ದ ವನ್ದೇ |
ಚನ್ದ್ರಶತಾನನ ಕುನ್ದಸುಹಾಸ ನನ್ದಿತದೈವತಾನನ್ದಸುಪೂರ್ಣ || ೬||

ದೇವಕಿನನ್ದನ ಸುನ್ದರರೂಪ ರುಕ್ಮಿಣಿವಲ್ಲಭ ಪಾಂಡವಬನ್ಧೋ |
ದೈತ್ಯವಿಮೋಹಕ ನಿತ್ಯಸುಖಾದೇ ದೇವವಿಬೋಧಕ ಬುದ್ಧಸ್ವರೂಪ || ೭||

ದುಷ್ಟಕುಲಾನ್ತಕ ಕಲ್ಕಿಸ್ವರೂಪ ಧರ್ಮವಿವರ್ಧನ ಮೂಲಯುಗಾದೇ |
ನಾರಾಯಣಾಮಲಕಾರಣಮೂರ್ತೇ ಪೂರ್ಣಗುಣಾರ್ಣವ ನಿತ್ಯಸುಬೋಧ || ೮||

ಆನನ್ದತೀರ್ಥಕೃತಾ ಹರಿಗಾಥಾ ಪಾಪಹರಾ ಶುಭನಿತ್ಯಸುಖಾರ್ಥಾ || ೯||

ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯ ವಿರಚಿತಂ
ದ್ವಾದಶಸ್ತೋತ್ರೇಷು ಷಷ್ಠಸ್ತೋತ್ರಂ ಸಮ್ಪೂರ್ಣಮ್

---------------------------------------

ಶ್ರೀ ವಾದಿರಾಜ ತೀರ್ಥ ವಿರಚಿತ ಶ್ರೀ ಶ್ರೀನಿವಾಸ ಕಲ್ಯಾಣ ||

ಸ್ತ್ರೀಯರೆಲ್ಲರೂ ಬನ್ನೀರೇ , ಶ್ರೀನಿವಾಸನ ಪಾಡಿರೇ
ಜ್ಞಾನಗುರುಗಳಿಗೊಂದಿಸಿ , ಮುಂದೆ ಕಥೆಯ ಪೇಳುವೆ||ಪ||

ಗಂಗಾತೀರದಿ ಋಷಿಗಳು , ಅಂದು ಯಾಗವ ಮಾಡ್ದರು
ಬಂದು ನಾರದ ನಿಂತುಕೊಂಡು ಯಾರಿಗೆಂದು, ಕೇಳಲು
ಅರಿತು ಬರಬೇಕು ಎಂದು , ಆ ಮುನಿಯು ತೆರಳಿದ, ಭೃಗುಮುನಿಯು ತೆರಳಿದ
ನಂದಗೋಪನ ಮಗನ ಕಂದನ , ಮಂದಿರಕ್ಕಾಗೆ ಬಂದನು

ವೇದಗಳನೆ ಓದುತಾ , ಹರಿಯನೂ ಕೊಂಡಾಡುತಾ
ಇರುವ ಬೊಮ್ಮನ ನೋಡಿದ , ಕೈಲಾಸಕ್ಕೆ ಬಂದನು
ಕಂಬುಕಂಠನು ಪಾರ್ವತಿಯೂ , ಕಲೆತಿರುವುದ ಕಂಡನು
ಸೃಷ್ಟಿಯೊಳಗೆ ನಿನ್ನ ಲಿಂಗ ಶೇಷ್ಠವಾಗಲೆಂದನು
ವೈಕುಂಠಕ್ಕೆ ಬಂದನು , ವಾರಿಜಾಕ್ಷನ ಕಂಡನು

ಕೆಟ್ಟಕೋಪದಿಂದ ಒದ್ದರೆ , ಎಷ್ಟುನೊಂದಿತೆಂದನು
ಥಟ್ಟನೆ ಬಿಸಿನೀರಿನಿಂದ , ನೆಟ್ಟಗೆ ಪಾದ ತೊಳೆದನು
ಬಂದ ಕಾರ್ಯ ಆಯಿತೆಂದು , ಅಂದು ಮುನಿಯು ತೆರಳಿದ
ಬಂದು ನಿಂದು ಸಭೆಯೊಳಗೆ , ಇಂದಿರೇಶನ ಹೊಗಳಿದ
ಪತಿಯ ಕೂಡೆ ಕಲಹ ಮಾಡಿ , ಕೊಲ್ಹಾಪುರಕ್ಕೆ ಹೋದಳು
ಸತಿಯು ಪೋಗೆ ಪತಿಯು ಹೊರಟು , ಗಿರಿಗೆ ಬಂದು ಸೇರಿದ
ಹುತ್ತದಲ್ಲೇ ಹತ್ತುಸಾವಿರ ವರುಷ ಗುಪ್ತವಾಗಿದ್ದ

ಬ್ರಹ್ಮ ಧೇನುವಾದನು , ರುದ್ರವತ್ಸನಾದನು
ಧೇನು ಮುಂದೆ ಮಾಡಿಕೊಂಡು , ಗೋಪಿ ಹಿಂದೆ ಬಂದಳು
ಕೋಟಿ ಹೊನ್ನು ಬಾಳುವೋದು , ಕೊಡದ ಹಾಲು ಕರೆವುದು
ಪ್ರೀತಿಯಿಂದಲಿ ತನ್ನ ಮನೆಗೆ , ತಂದುಕೊಂಡನು ಚೋಳನು

ಒಂದು ದಿವಸ ಕಂದಗ್ ಹಾಲು ಚಂದದಿಂದಲ್ಲಿ ಕೊಡಲಿಲ್ಲ

ಅಂದು ರಾಯನ ಮಡದಿ ಕೋಪಿಸಿ , ಬಂದು ಗೋಪನ ಹೊಡೆದಳು
ಧೇನು ಮುಂದೆ ಮಾಡಿಕೊಂಡು , ಗೋಪ ಹಿಂದೆ ನಡೆದನು
ಕಾಮಧೇನು ಕರೆದ ಹಾಲು , ಹರಿಯ ಶಿರಕೆ ಬಿದ್ದಿತು
ಇಷ್ಟು ಕಷ್ಟ ಬಂದಿತೆಂದು , ಪೆಟ್ಟು ಬಡಿಯೆ ಹೋದನು
ಕೃಷ್ಣ ತನ್ನ ಮನದಲ್ಯೋಚಿಸಿ , ಕೊಟ್ಟ ತನ್ನ ಶಿರವನು
ಏಳು ತಾಳೆಮರದ ಉದ್ದ , ಏಕವಾಗಿ ಹರಿಯಿತು
ರಕ್ತವನ್ನು ನೋಡಿ ಗೋಪ , ಮತ್ತೆ ಸ್ವರ್ಗಕ್ಕೇರಿದ
ಕಷ್ಟವನ್ನು ನೋಡಿ ಗೋವು , ಅಷ್ಟು ಬಂದ್ ಹೇಳಿತು
ಥಟ್ಟನೆ ರಾಯ ಎದ್ದು ಗಿರಿಗೆ , ಬಂದು ಬೇಗ ಸೇರಿದ
ಏನು ಕಷ್ಟ ಇಲ್ಲಿ ಹೀಗೆ , ಯಾವ ಪಾಪಿ ಮಾಡಿದ,
ಇಷ್ಟು ಕಷ್ಟ ಕೊಟ್ಟವಾಗೆ , ಭ್ರಷ್ಟಪಿಶಾಚಿಯಾಗೆಂದ
ಪೆಟ್ಟು ವೇದನೆ ತಾಳಲಾರದೆ , ಬೃಹಸ್ಪತಿಯ ಕರೆಸಿದ

ಅರುಣ ಉದಯದಲ್ಲೆದ್ದು , ಔಷಧಕ್ಕೆ ಪೋದನು
ಕ್ರೋಧರೂಪಿಯ ಕಂಡನು , ಕೂಡಿ ಮಾತನಾಡಿದನು
ಇರುವುದಕ್ಕೆ ಸ್ಥಳವು ಎನಗೆ , ಏರ್ಪಾಡಾಗಬೇಕೆಂದ
ನೂರುಪಾದ ಭೂಮಿ ಕೊಟ್ಟರೆ , ಮೊದಲು ಪೂಜೆ ನಿಮಗೆಂದ
ಪಾಕಪಕ್ವ ಮಾಡುವುದಕ್ಕೆ , ಆಕೆ ಬಕುಳೆ ಬಂದಳು
ಭಾನುಕೋಟಿತೇಜನೀಗ , ಬೇಟೆಯಾಡ ಹೊರಟನು

ಮಂಡೆ ಬಾಚಿ ದೊಂಡೆ ಹಾಕಿ , ದುಂಡುಮಲ್ಲಿಗೆ ಮುಡಿದನು
ಹಾರಪದಕ ಕೊರಳಲ್ ಹಾಕಿ , ಫಣೆಗೆ ತಿಲಕವಿಟ್ಟನು
ಅಂಗುಲಿಗೆ ಉಂಗುರ , ರಂಗಶೃಂಗಾರವಾದವು
ಪಟ್ಟೆನುಟ್ಟು ಕಚ್ಚೆ ಕಟ್ಟಿ , ಪೀತಾಂಬರವ ಹೊದ್ದನು
ಢಾಳು ಕತ್ತಿ ಉಡಿಯಲ್ ಸಿಕ್ಕಿ , ಜೋಡೂ ಕಾಲಲ್ಲಿ ಮೆಟ್ಟಿದ
ಕರದಿ ವೀಳ್ಯವನ್ನೇ ಪಿಡಿದು , ಕನ್ನಡೀಯ ನೋಡಿದ
ಕನಕಭೂಷಣವಾದ ತೊಡೆಗೆ , ಕಮಲನಾಭ ತೊಟ್ಟನು
ಕನಕಭೂಷಣವಾದ ಕುದುರೆ , ಕಮಲನಾಭ ಏರಿದ

ಕರಿಯ ಹಿಂದೆ ಹರಿಯು ಬರಲು , ಕಾಂತರೆಲ್ಲ ಕಂಡರು
ಯಾರು ಇಲ್ಲಿ ಬರುವರೆಂದು ದೂರ ಪೋಗಿರೆಂದರು
ನಾರಿಯರಿರುವ ಸ್ಥಳಕ್ಕೆ , ಯಾವ ಪುರುಷ ಬರುವನು
ಏಷ್ಟು ಹೇಳೆ ಕೇಳ ಕೃಷ್ಣ , ಕುದುರೆ ಮುಂದೆ ಬಿಟ್ಟನು
ಅಷ್ಟೂ ಮಂದಿರೆಲ್ಲ ಸೇರಿ , ಪೆಟ್ಟುಗಳನು ಹೊಡೆದರು
ಕಲ್ಲುಮಳೆಯ ಕರೆದರಾಗ , ಕುದುರೆ ಕೆಳಗೆ ಬಿದ್ದಿತು
ಕೇಶ ಬಿಚ್ಚಿ ವಾಸುದೇವ , ಶೇಷಗಿರಿಗೆ ಬಂದನು
ಪರಮಾನ್ನ ಮಾಡಿದ್ದೇನೆ , ಉಣ್ಣು ಬೇಗ ಎಂದಳು
ಅಮ್ಮ ಎನಗೆ ಅನ್ನ ಬೇಡ , ಎನ್ನ ಮಗನ ವೈರಿಯೇ
ಕಣ್ಣಿಲ್ಲಾದ ದೈವ ಅವಳ , ನಿರ್ಮಾಣವ ಮಾಡಿದ
ಯಾವ ದೇಶ ಯಾವೋಳಾಕೆ , ಎನಗೆ ಪೇಳು ಎಂದಳು

ನಾರಾಯಣನ ಪುರಕೆ ಪೋಗಿ , ರಾಮಕೃಷ್ಣರ ಪೂಜಿಸಿ
ಕುಂಜಮಣಿಯ ಕೊರಳಲ್ ಹಾಕಿ , ಕೂಸಿನ್ ಕೊಂಕಳದೆತ್ತಿದಾ
ಧರಣಿದೇವಿಗೆ ಕಣಿಯ ಕೇಳಿ , ಗಿರಿಗೆ ಬಂದು ಸೇರಿದ
ಕಾಂತರೆಲ್ಲ ಕೂಡಿಕೊಂಡು , ಆಗ ಬಕುಳೆ ಬಂದಳು

ಬನ್ನಿರಮ್ಮ ಸದನಕೆನುತ , ಬಹಳ ಮಾತನಾಡಿದರು
ತಂದೆತಾಯಿ ಬಂಧುಬಳಗ , ಹೊನ್ನು ಹಣ ಉಂಟೆಂದರು
ಇಷ್ಟು ಪರಿಯಲ್ಲಿದ್ದವಗೆ , ಕನ್ಯೆ ಯಾಕೆ ದೊರಕಿಲ್ಲಾ
ದೊಡ್ಡವಳಿಗೆ ಮಕ್ಕಳಿಲ್ಲ , ಮತ್ತೆ ಮದುವೆ ಮಾಡ್ವೆವು
ಬೃಹಸ್ಪತೀಯ ಕರೆಸಿದ , ಲಗ್ನಪತ್ರಿಕೆ ಬರೆಸಿದ
ಶುಕಾಚಾರ್ಯರ ಕರೆಸಿದ , ಮದುವೆ ಓಲೆ ಬರೆಸಿದ

ವಲ್ಲಭೇನ ಕರೆವುದಕ್ಕೆ , ಕೊಲ್ಹಾಪುರಕ್ಕೆ ಪೋದರು
ಗರುಡನ್ ಹೆಗಲನೇರಿಕೊಂಡು , ಬೇಗ ಹೊರಟುಬಂದರು
ಅಷ್ಟವರ್ಗವನ್ನು ಮಾಡಿ , ಇಷ್ಟ ದೇವರ ಪೂಜಿಸಿ

ಲಕ್ಷ್ಮೀಸಹಿತ ಆಕಾಶರಾಜನ , ಪಟ್ಟಣಕ್ಕೆ ಬಂದರು
ಕನಕಭೂಷಣವಾದ ತೊಡುಗೆ , ಕಮಲನಾಭ ತೊಟ್ಟನು
ಕನಕಭೂಷಣವಾದ ಮಂಟಪ , ಕಮಲನಾಭ ಏರಿದ

ಕಮಲನಾಭಗೆ ಕಾಂತಿಮಣಿಯ , ಕನ್ಯಾದಾನವ ಮಾಡಿದ
ಕಮಲನಾಭ ಕಾಂತೆ ಕೈಗೆ , ಕಂಕಣವನ್ನೇ ಕಟ್ಟಿದ
ಶ್ರೀನಿವಾಸ ಪದ್ಮಾವತಿಗೆ , ಮಾಂಗಲ್ಯವನೆ ಕಟ್ಟಿದ
ಶ್ರೀನಿವಾಸನ ಮದುವೆ ನೋಡೆ , ಸ್ತ್ರೀಯರೆಲ್ಲರು ಬನ್ನಿರೇ
ಪದ್ಮಾವತಿಯ ಮದುವೆ ನೋಡೆ , ಮುದ್ದು ಬಾಲೆಯರ್ ಬನ್ನಿರೇ
ಶಂಕೆಯಿಲ್ಲದೆ ಹಣವ ಸುರಿದು , ವೇಂಕಟೇಶನ ಕಳುಹಿದ

ಲಕ್ಷತಪ್ಪು ಎನ್ನಲ್ಲುಂಟು , ಪಕ್ಷಿವಾಹನ ಸಲಹೆನ್ನ
ಕೋಟಿತಪ್ಪು ಎನ್ನಲ್ಲುಂಟು , ಕುಸುಮನಾಭ ಸಲಹೆನ್ನ
ಶಂಕೆ ಇಲ್ಲದೆ ವರವ ಕೊಡುವ , ವೇಂಕಟೇಶ ಸಲಹೆನ್ನ
ಭಕ್ತಿಯಿಂದಲಿ ಹೇಳ್ ಕೇಳ್ದವರಿಗೆ , ಮುಕ್ತಿ ಕೊಡುವ ಹಯವದನ ||

ಜಯ ಜಯ ಶ್ರೀನಿವಾಸನಿಗೆ , ಜಯ ಜಯ ಪದ್ಮಾವತಿಗೆ
ಒಲಿದಂತಹ ಶ್ರೀಹರಿಗೆ , ನಿತ್ಯ ಶುಭಮಂಗಳ
ಶೇಷಾದ್ರಿಗಿರಿವಾಸ , ಶ್ರೀದೇವಿ ಅರಸಗೆ
ಕಲ್ಯಾಣಮೂರ್ತಿಗೆ , ನಿತ್ಯಜಯಮಂಗಳ ||
--------------------------------------

ಶ್ರೀ ಗುರು ಜಗನ್ನಾಥ ದಾಸರ
|| ಶ್ರೀ ವೇಂಕಟೇಶ ಸ್ತವರಾಜ ||

ಶ್ರೀರಮಣ ಸರ್ವೇಶ ಸರ್ವದ |
ಸಾರಭೋಕ್ತ ಸ್ವತಂತ್ರ ಸರ್ವದ |

ಪಾರ ಮಹಿಮೋದಾರ ಸದ್ಗುಣ ಪೂರ್ಣ ಗಂಭೀರ ||
ಸಾರಿದವರಘ ದೂರಗೈಸಿ |
ಸೂರಿಜನರಿಗೆ ಸೌಖ್ಯ ನೀಡುವ |
ಧೀರ ವೇಂಕಟರಮಣ ಕರುಣದಿ ಪೊರೆಯೊ ನೀ ಎನ್ನ || ೧ ||

ಘನ್ನಮಹಿಮಾ ಪನ್ನಪಾಲಕ |
ನಿನ್ನಹೊರತಿನ್ನನ್ಯದೇವರ |
ಮನ್ನದಲಿ ನಾ ನೆನೆಸೆನೆಂದಿಗು ಬನ್ನ ಬಡಿಸದಿರು |
ಎನ್ನಪಾಲಕ ನೀನೇ ಇರುತಿರೆ
ಇನ್ನು ಭವ ಭಯವೇಕೆ ಎನಗೆ |
ಚೆನ್ನ ವೇಂಕಟರಮಣ ಕರುಣದಿ ಪೊರೆಯೊ ನೀ ಎನ್ನ || ೨ ||

ಲಕುಮಿ ಬೊಮ್ಮ ಭವಾಮರೇಶರು |
ಭಕುತಿ ಪೂರ್ವಕ ನಿನ್ನ ಭಜಿಸಿ ಸಕಲ
ಲೋಕಕೆ ನಾಥರೆನಿಪರು ಸರ್ವ ಕಾಲದಲಿ||
ನಿಖಿಳ ಜೀವರ ಪೋರೆವ ದೇವನೆ |
ಭಕುತಿ ನೀ ಯೆನಗೀಯದಿರಲು
ವ್ಯಕುತವಾಗ್ಯಪಕೀರ್ತಿ ಬಪ್ಪದೊ ಶ್ರೀನಿಕೇತನನೆ || ೩ ||

ಯಾಕೆ ಪುಟ್ಟದು ಕರುಣ ಎನ್ನೊಳು |
ಸಾಕಲಾರೆಯ ನಿನ್ನ ಶರಣನ|
ನೂಕಿಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಬಪ್ಪುವುದೇ ||
ನೋಕನೀಯನೆ ನೀನೇ ಎನ್ನನು |
ಜೋಕೆಯಿಂದಲಿ ಕಾಯೋ ಬಿಡದೆ |
ಏಕದೇವನು ನೀನೇ ವೇಂಕಟ ಶೇಷಗಿರಿವಾಸ || ೪ ||

ಅಂಬುಜಾಂಬಕ ನಿನ್ನ ಪದಯುಗ |
ನಂಬಿಕೊಂಡ ಈ ಪರಿಯಲಿರುತಿರೆ |

ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ತಿತಿ ತೋರೆ ||
ಬಿಂಬ ಮೂರುತಿ ನಿನ್ನ ಕರಗತ |
ಕಂಬುವರವೇ ಗತಿಯೋ ವಿಶ್ವಕುಟುಂಬಿ |
ಎನ್ನನು ಸಲಹೋ ಸಂತತ ಶೇಷಗಿರಿವಾಸ || ೫ ||

ಸಾರಸಿರಿ ವೈಕುಂಠ ತ್ಯಜಿಸಿ |
ಧಾರುನಿಯೊಳ್ ಗೊಲ್ಲನಾಗಿ
ಚೋರ ಕರ್ಮವ ಮಾಡಿ ಬದುಕಿಹ ದಾರಿಗರಿಕಿಲ್ಲ ||
ಸಾರಿ ಪೇಳುವೆ ನಿನ್ನ ಗುಣಗಳ |
ಪಾರವಾಗಿರುತಿಹವೊ ಜನರಿಗೆ
ಧೀರ ವೆಂಕಟ ರಮಣ ಕರುಣದಿ ಪೊರೆಯೊ ನೀ ಯೆನ್ನ ||೬ ||

ನೀರ ಮುಳುಗಿ ಭಾರ ಪೊತ್ತು |
ಧಾರುಣೀ ತಳವಗೆದು ಸಿಟ್ಟಲಿ |
ಕ್ರೂರನುದರವ ಸೀಳಿ ಕರುಳಿನ ಮಾಲೆ ಧರಿಸಿದರು ||
ಘೋರ ವಿಪ್ರ ಕುಠಾರಿ ವನವನ |
ಚಾರಿ ಗೋಪ ದಿಗಂಬರಾಶ್ವವ ಏರಿ ಪೋದರು
ಬಿಡೆನೋ ವೇಂಕಟ ಶೇಷಗಿರಿವಾಸ ||೭||

ಲಕ್ಷ್ಮೀನಾಯಕ ಸಾರ್ವಭೌಮನೆ |
ಪಕ್ಷಿವಾಹನ ಪರಮ ಪುರುಷನೆ |
ಮೊಕ್ಷದಾಯಕ ಪ್ರಾಣಜನಕನೆ ವಿಶ್ವ ವ್ಯಾಪಕನೆ ||
ಅಕ್ಷಯಾಂಬರವಿತ್ತು ವಿಜಯನ |
ಪಕ್ಷಪಾತವ ಮಾಡಿ ಕುರುಗಳ ಲಕ್ಷ್ಯಮಾಡದೆ
ಕೊಂದೆಯೋ ಶ್ರೀ ಶೇಷಗಿರಿವಾಸ ||೮||

ಹಿಂದೆ ನೀ ಪ್ರಹ್ಲಾದಗೋಸುಗ |
ಎಂದು ನೋಡದ ರೂಪ ಧರಿಸಿ |

ಬಂದು ದೈತ್ಯನ ಒಡಲ ಬಗೆದು ಪೊರೆದೆ ಬಾಲಕನ ||
ತಂದೆತಾಯ್ಗಳ ಬಿಟ್ಟು ವಿಪಿನದಿ |
ನಿಂದು ತಪಿಸುವ ಪಂಚಮತ್ಸರ |
ಕಂದನಾ ಧ್ರುವನಿಗೋಲಿದು
ಪೊರೆದೆಯೊ ಶೇಷಗಿರಿವಾಸ ||೯||

ಪಿಂತು ಮಾದಿದ ಮಹಿಮೆಗಳ ನಾ |
ನೆಂತು ವರ್ಣಿಸಲೇನು ಫಲ ಶ್ರೀಕಾಂತ ಎನ್ನನು
ಪೊರೆಯೆ ಕೀರುತಿ ನಿನಗೆ ಫಲವೆನಗೆ ||
ಕಂತು ಜನಕನೆ ಎನ್ನ ಮನಸಿನ |
ಅಂತರಂಗದಿ ನೀನೆ ಸರ್ವದ |
ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ ||೧೦||

ಮಡುವಿನೊಳಗಿಹ ಮಕರಿಕಾಲನು |
ಪಿಡಿದು ಬಾಧಿಸೆ ಕರಿಯು ತ್ರಿಜಗ|
ದ್ವಡೆಯ ಪಾಲಿಸೊ ಎನಲು ತಕ್ಷಣ ಬಂದು ಪಾಲಿಸಿದೆ ||
ಮಡದಿ ಮಾತನು ಕೇಳಿ ಬಲುಪರಿ |
ಬಡವ ಬ್ರಾಹ್ಮಣ ಧಾನ್ಯ ಕೊಡಲು |
ಪೊಡವಿಗಸದಳ ಭಾಗ್ಯ ನೀಡಿದೆ ಶೇಷಗಿರಿವಾಸ ||೧೧||

ಶ್ರೀನಿವಾಸನೆ ಭಕ್ತಪೋಷನೆ |
ಜ್ಞಾನಿ ಕುಲಗಳಿಗಭಯದಾಯಕ |
ಧೀನಬಾಂದವ ನೀನೇ ಎನ್ನ ಮನದರ್ಥ ಪೂರೈಸೋ ||
ಅನುಪಮೋಪಮಜ್ಞಾನ ಸಂಪದ |
ವಿನಯ ಪೂರ್ವಕವಿತ್ತು ಪಾಲಿಸೊ |
ಜನುಮ ಜನುಮಕೆ ಮರೆಯ ಬೇಡವೋ ಶೇಷಗಿರಿವಾಸ || ೧೨ ||

ಮದವು ಮತ್ಸರ ಲೋಭ ಮೋಹವು |

ಒದಗಬಾರದು ಎನ್ನ ಮನದಲಿ |
ಪದುಮನಾಭನೆ ಜ್ಞಾನ ಭಕ್ತಿವಿರಕ್ತಿ ನೀನಿತ್ತು |
ಹೃದಯ ಮಧ್ಯದಿ ನಿನ್ನ ರೂಪವು |
ವದನದಲಿ ತವ ನಾಮಮಂತ್ರವು |
ಸದಯ ಪಾಲಿಸು ಬೇಡಿಕೊಂಬೇನೊ ಶೇಷಗಿರಿವಾಸ ‖ ೧೩ ‖

ಅಂದನುಡಿ ಪುಸಿಯಾಗಬಾರದು |
ಬಂದ ಭಾಗ್ಯವು ಪೋಗಬಾರದು |
ಕುಂದುಬಾರದೆ ನಿನ್ನ ಕರುಣವು ದಿನದಿ ವರ್ಧಿಸಲಿ |
ನಿಂದೆ ಮಾಡುವ ಜನರ ಸಂಗವು |
ಎಂದಿಗಾದರು ದೊರೆಯಬಾರದು |
ಎಂದು ನಿನ್ನನು ಬೇಡಿಕೊಂಬೆನೊ ಶೇಷಗಿರಿವಾಸ ‖ ೧೪ ‖

ಏನು ಬೇಡಲಿ ಎನ್ನ ದೇವನೇ |
ಸಾನುರಾಗದಿ ಎನ್ನ ಪಾಲಿಸೊ |
ನಾನಾ ವಿಧವಿಧ ಸೌಖ್ಯ ನಿಡುವುದಿಹ ಪರಂಗಳಲಿ |
ಶ್ರೀನಿವಾಸನೆ ನಿನ್ನ ದಾಸಗೆ |
ಏನು ಕೊರೆತಿಲೆಲ್ಲಿ ನೋಡಲು |
ನೀನೇ ನಿಂತೀವಿದದಿ ಪೇಳಿಸು ಶೇಷಗಿರಿವಾಸ ‖೧೫ ‖

ಆರು ಮುನಿದವರೇನು ಮಾಳ್ಪರೊ |
ಆರು ಒಲಿದವರೇನು ಮಾಳ್ಪರೊ |
ಆರುನೇಹಿಗರಾರು ದ್ವೇಶಿಗಳಾರುದಾಶಿನರು ‖
ಕ್ರೂರ ಜೀವರ ಹಣಿದು ಸಾತ್ವಿಕ |
ಧೀರ ಜೀವರ ಪೊರೆದು ನಿನ್ನಲಿ |
ಸಾರ ಭಕುತಿಯನಿತ್ತು ಪಾಲಿಸೋ ಶೇಷಗಿರಿವಾಸ ‖ ೧೬ ‖

ನಿನ್ನ ಸೇವೆಯನಿತ್ತು ಎನಗೆ |

ನಿನ್ನ ಪದಯುಗಭಕ್ತಿ ನೀಡಿ |
ನಿನ್ನ ಗುಣಗಣ ಸ್ತವನ ಮಾಡುವ ಜ್ಞಾನ ನೀನಿತ್ತು |
ಎನ್ನ ಮನದಲಿ ನೀನೇ ನಿಂತು |
ಘನ್ನಕಾರ್ಯವ ಮಾಡಿ ಮಾಡಿಸು |
ಧನ್ಯನೆಂದೆನಿಸೆನ್ನ ಲೋಕದಿ ಶೇಷಗಿರಿವಾಸ ‖ ೧೭ ‖

ಜಯ ಜಯತು ಶಠ ಕೂರ್ಮರೂಪನೆ |
ಜಯ ಜಯತು ಕಿಟ ಸಿಂಹ ವಾಮನ |
ಜಯ ಜಯತು ಭೃಗುರಾಮ ರಘುಕುಲಸೋಮ ಶ್ರೀರಾಮ ‖
ಜಯ ಜಯತು ಸಿರಿ ಯದುವರೇಣ್ಯನೆ |
ಜಯ ಜಯತು ಜನಮೋಹ ಬುದ್ಧನೆ |
ಜಯ ಜಯತು ಕಲಿಕಲ್ಮಶಘ್ನನೆ ಕಲ್ಕಿನಾಮಕನೆ ‖ ೧೮ ‖

ಕರುಣಸಾಗರ ನೀನೇ ನಿಜಪದ |
ಶರಣವತ್ಸಲ ನೀನೇ ಶಾಶ್ವತ |
ಶರಣ ಜನಮಂದಾರ ಕಮಲಾ ಕಾಂತ ಜಯವಂತ |
ನಿರುತ ನಿನ್ನನು ನುತಿಸಿ ಪಾಡುವೆ |
ವರದ ಗುರು ಜಗನ್ನಾಥವಿಠ್ಠಲ |
ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ ‖ ೧೯ ‖

---------------------------------------

ಬೇಗ ಹೊರಟಾ ಯೋಗಿ ವೇಶದಿಂದ ಶ್ರೀ ಹರಿ
ಕಾಶಿಯಾತ್ರೆಯನ್ನು ಮಾಡಿ ಬರುವೆನೆಂದನು ಶ್ರೀ ಹರಿ ‖

ಕಾವಿ ವಸ್ತ್ರ ಉಟ್ಟು ಕರದಿ ಕೋಲ ಪಿಡಿದನೇ
ಕರ್ಣ ಕುಂಡಲ ಹೊಳೆವ ಪಾದ ರಕ್ಷೆ ಧರಿಸಿದಾ
ಅಡಿಗಡಿಗೆ ಬಿಡಿಮಲ್ಲಿಗೆ ಉದುರಿ ಬೀಳುತ್ತಾ
ನಡೆದನು ನಾರಾಯಣ ಪುರದ ರಾಜಬೀದಿಯಲಿ ‖೧‖
ಕಂಡು ಗಗನರಾಯ ಧರಣಿದೇವಿ ಸಹಿತಲಿ

ಬಂದು ಹರಿಯ ಪಾದಕ್ಕೆರಗಿ ಬೇಡಿಕೊಂಡರೂ
ಮುದ್ದು ಪದ್ಮಾವತಿಯ ಕೊಟ್ಟು ಮದುವೆ ನಡಿಸುವೆ
ಕರೆದು ತಂದರಾಗ ಪ್ರಸನ್ನ ವೇಂಕಟೇಶನನ್ನು ||೨||
-------------------------------------

ಕಟ್ಟಿದ ಮಂಗಳಸೂತ್ರವ ದೇವ || ಪ ||

ಗಟ್ಟಿ ಗಂಟು ಹಾಕಿದ ಚಿತ್ರವು
ಪರಮೇಷ್ಠಿ ರುದ್ರಾದ್ಯರ ಸ್ತೋತ್ರವು ಮತ್ತೆ
ಶಿಷ್ಟ ಜನರ ದಿವ್ಯ ಗಾನವು ತಾನು
ಅಷ್ಟು ಕೇಳುತ ಸಂತುಷ್ಟ ಮನಸಿನಿಂದ
ಬೆಟ್ಟದೊಡೆಯ ಜಗಜಟ್ಟಿ ವೇಂಕಟ ರಮಣ || ೧ ||

ತುಂಬುರು ನಾರದರ ಗಾನವು,
ದಿವ್ಯ ರಂಭೆ ಊರ್ವಶೀಯರ ನಾಟ್ಯವು
ಅಲ್ಲಿ ತುಂಬಿದ ಸುರಮುನಿ ಕೂಟವು
ಮಹಾಸಂಭ್ರಮ ಸಭೆಯಲ್ಲಿ ಕಂಬು ಕಂಧರನಿಗೆ
ಅಂಬರ ವಾಣಿಯು ಜಯ ಜಯ ಜಯವೆನೆ ||೨||

ಕ್ಷೋಣಿಯ ರಾಜಾದಿ ರಾಜರು ತಾವು
ಮಾಣಿಕ್ಯ ಮುತ್ತು ರತ್ನರಾಶಿಯ ಪಾದ
ಕಾಣಿಕೆ ಕಪ್ಪ ತಂದೀವರು ಸಿರಿ
ವೇಣು ವಿನೋದನು ಜಾಣೆ ಪದ್ಮಾವತಿಯ
ಪಾಣಿಗ್ರಹಣ ಕೊಂಡು ಎಣಾಙ್ಕ ಕುಲ ತಿಲಕ ||೩||

ಅಷ್ಟ ಲಕುಮೀ ಪತಿ ತೋಷದಿ ತನ್ನ
ಇಷ್ಟ ಸುಜನರ ಮಧ್ಯದಿ
ಮಾವ ಕೊಟ್ಟು ಕನ್ಯಾಮಣಿ ಕಂಠದಿ
ಅಂದು ಅಷ್ಟದಶ ವಾದ್ಯಗಳು

ಘಟ್ಟಿಯಾಗಿ ಮೊರೆಯಲು
ಶಿಷ್ಟ ಪ್ರಸನ್ನ ವೇಂಕಟ ವಿಠ್ಠಲ ರಾಯ ||೪||
-------------------------------------

ವರ ವೈಕುಂಠದಿ ಬಂದವಗೆ
ವರಗಿರಿಯಲಿ ಸಂಚರಿಸುವವಗೆ
ವರಹ ದೇವನ ಅನುಸರಿಸಿ
ಸ್ವಾಮಿ ಪುಷ್ಕರಣಿ ತೀರದಲ್ಲಿರುವವಗೆ
ಮಂಗಳಂ ಜಯ ಮಂಗಳಂ ೧

ಸರಸದಿ ಬೇಟೆಗೆ ಹೊರಟವಗೆ
ಸರಸಿಜಾಕ್ಷಿಯಳ ಕಂಡವಗೆ
ಮರುಳಾಟದಿ ತಾ ಪರವಶನಾಗುತ
ಕೊರವಿ ವೇಷ ಧರಿಸಿರುವವಗೆ
ಮಂಗಳಂ ಜಯ ಮಂಗಳಂ ೨

ಗಗನ ರಾಜ ಪುರಕ್ ಹೋದವಗೆ
ಬಗೆ ನುಡಿಗಳ ನುಡಿದವಗೆ
ಅಗವಾಸಿಗೆ ನಿನ್ನ ಮಗಳನು ಕೊಡು ಎಂದು
ಗಗನ ರಾಜನ ಸತಿಗ್ ಹೇಳ್ದವಗೆ
ಮಂಗಳಂ ಜಯ ಮಂಗಳಂ ೩

ತನ್ನ ಕಾರ್ಯ ತಾ ಮಾಡ್ದವಗೆ
ಇನ್ನೊಬ್ಬರ ಹೆಸರ್ ಹೇಳ್ದವಗೆ
ಮುನ್ನ ಮದುವೆ ನಿಶ್ಚಯವಾಗಿರಲು
ತನ್ನ ಬಳಗ ಕರೆಸಿರುವವಗೆ
ಮಂಗಳಂ ಜಯ ಮಂಗಳಂ ೪

ಎತ್ತಿ ನಿಬ್ಬಣ ಹೊರಟವಗೆ

ನಿತ್ಯ ತೃಪ್ತನಾಗಿರುವವಗೆ
ಉತ್ತರಣೆಯ ವಾಗರನುಂಡು
ತೃಪ್ತನಾಗಿ ತೇಗಿರುವವಗೆ
ಮಂಗಳಂ ಜಯ ಮಂಗಳಂ ೫

ಒದಗಿ ಮುಹೂರ್ತಕೆ ಬಂದವಗೆ
ಸದಯ ಹೃದಯನಆಗಿರುವವಗೆ
ಮುದದಿಂದಲಿ ಶ್ರೀ ಪದುಮಾವತಿಯಳ
ಮದುವೆ ಮಾಡಿಕೊಂಡ ಮದುಮಗಗೆ
ಮಂಗಳಂ ಜಯ ಮಂಗಳಂ ೬

ಕಾನ್ತೆಯಿಂದ ಸಹಿತಾದವಗೆ
ಸಂತೋಷದಿ ಕುಳಿತಿರುವವಗೆ
ಸಂತತ ಶ್ರೀಮದನಂತಾದ್ರೀಶಗೆ
ಶಾಂತ ಮೂರುತಿ ಸರ್ವೋತ್ತಮಗೆ
ಮಂಗಳಂ ಜಯ ಮಂಗಳಂ ೭

-------------------------------------

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು
ಮನ್ನಿಸುವರೊ ಮಹರಾಯ [೨]
ಎನ್ನ ಪುಣ್ಯಗಳಿಂದ ಈ ಪರಿ ಉಂಟೇನೋ [೨]
ನಿನ್ನದೇ ಸಕಲ ಸಂಪತ್ತು ||ಪ||

ಜೀರ್ಣ ಮಲಿನ ವಸ್ತ್ರ ಕಾಣದ ಮನುಜಗೆ
ಊರ್ಣ ವಿಚಿತ್ರ ಸುವಸನ
ವರ್ಣವರ್ಣದಿಂದ ಬಾಹೋದೇನೊ [೨]
ಸಂಪೂರ್ಣ ಗುಣಾರ್ಣವ ದೇವಾ (೧)

ಸಂಜೀತನಕ ಇದ್ದು ಸಣ್ಣ ಸವುಟಿನ

ತುಂಬ ಗಂಜಿ ಕಾಣದೆ ಬಳಳಿದೆನೊ
ವ್ಯಂಜನ ಮೊದಲಾದ ನಾನಾ ರಸಂಗಳ [೨]
ಭುಂಜಿಸುವುದು ಮತ್ತೇನೋ (೨)

ಒಬ್ಬ ಹೆಂಗಸಿನ ಹೊಟ್ಟೆಗೆ ಹಾಕುವದಕ್ಕಿನ್ನು
ತಬ್ಬಿಬ್ಬುಗೊಂಡೆನೊ ಹಿಂದೆ
ನಿರ್ಭರದಿಂದಲಿ ಸರ್ವರ ಕೂಡುಂಬೊ [೨]
ಹಬ್ಬದೂಟವ ಉಣಿಸುವಿಯೋ (೩)

ಮನೆಮನೆ ತಿರುಗಿದರು ಕಾಸು ಪುಟ್ಟದೆ
ಸುಮ್ಮನೆ ಚಾಲವರಿದು ಬಾಳಳಿದೆನೊ
ಹಣ ಹೊನ್ನು ದ್ರವ್ಯಂಗಳ್ ಇದ್ದಲ್ಲಿಗೆ [೨]
ತನಗೆ ಪ್ರಾಪ್ತಿ ನೋಡೋ ಜೀಯ (೪)

ಮಧ್ಯಾಹ್ನ ಕಾಲಕ್ಕೆ ಅತಿಥಿಗಳಿಗೆ ಅನ್ನ
ಮೆದ್ದೆನೆಂದರೆ ಈಯಗಾಣೆ
ಈ ಧರೆಯೊಳಗೆ ಸತ್ಪಾತ್ರರಿಗುನಿಸುವ [೨]
ಪದ್ಧತಿ ನೋಡೊ ಪುಣ್ಯಾತ್ಮ (೫)

ನೀಚೋಚ್ಛ ತಿಳಿಯದೆ ಸರ್ವರ ಚರಣಕೆ
ಚಾಚಿದೆನೊಸಲ ಹಸ್ತಗಳ
ಯೋಚಿಸಿ ನೋಡಲು ಸೋಜಿಗವಾಗಿದೆ [೨]
ವಾಚಕ್ಕೆ ನಿಲುಕದೊ ಹರಿಯೆ (೬)

ವೈದಿಕ ಪದವೀಯ ಕೊಡುವನಿಗೆ ಲೌಕಿಕ
ಐದಿಸುವದು ಮಹ ಖ್ಯಾತೆ
ಮೈದುನಗೊಲಿದ ಶ್ರೀ ವಿಜಯವಿಠ್ಠಲ ನಿನ್ನ [೨]
ಪಾದ ಸಾಕ್ಷಿಯ ಅನುಭವವೊ (೭)